(ಗೊಂದಲ)

ಈ) ವಿಷಯ : ಶಿಷ್ಟಾಚಾರದ ಬಗ್ಗೆ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ಹಿರೇಕೆರೂರು ತಾಲ್ಲೂಕಿನ ಒಬ್ಬ ಶಾಸಕನಾಗಿ, ಹಿರೇಕೆರೂರು ತಾಲ್ಲೂಕಿನಲ್ಲಿ ದಿನಾಂಕ: 17.03.2012 ರಂದು ನಡೆದಂತಹ ನ್ಯಾಯಾಲಯಗಳ ವಕೀಲರ ಭವನ ಮತ್ತು Records Room ಇವುಗಳ ಉದ್ಘಾಟನೆ ಸಮಾರಂಭಕ್ಕೆ ಸ್ಥಳೀಯ ಶಾಸಕರನ್ನು ಕಡೆಗಣಿಸಿ, ಶಿಷ್ಟಾಚಾರದ ಪ್ರಕಾರ ಸ್ಥಳೀಯ ಶಾಸಕರು ಸರ್ಕಾರದ ಯಾವುದೇ ಮೀಟಿಂಗ್‌ಗಳು ಅಥವಾ ಸರ್ಕಾರದ ಯಾವುದೇ ಕಾರ್ಯಕಲಾಪಗಳು ನಡೆದಾಗ ಅದರ ಅಧ್ಯಕ್ಷತೆಯನ್ನು ವಹಿಸುವುದು ಸಂಪ್ರದಾಯ ಹಾಗೂ ಶಿಷ್ಟಾಚಾರ. ಮಾನ್ಯ ಪ್ರಧಾನಮಂತ್ರಿ, ಮಾನ್ಯ ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಬಂದರೂ ಕೂಡ ಸ್ಥಳೀಯ ಶಾಸಕರೇ ಅದರ ಅಧ್ಯಕ್ಷತೆಯನ್ನು ವಹಿಸುವುದು ಅದರ ಶಿಷ್ಟಾಚಾರ ಮತ್ತು ಸರ್ಕಾರದ ನಿಯಮ. ಆದರೆ ದಿನಾಂಕ: 17.03.2012 ರಂದು ವಕೀಲರ ಭವನ ಮತ್ತು Records Room ಉದ್ಘಾಟನೆ ಸಮಾರಂಭಕ್ಕೆ ಸ್ಥಳೀಯ ಶಾಸಕರನ್ನು ಕಡೆಗಣಿಸಿ, ಸ್ಥಳೀಯ ಶಾಸಕರನ್ನು ಆಹ್ವಾನಿತರನ್ನಾಗಿ ಮಾಡಿ, Bar Association ಅಧ್ಯಕ್ಷರು, ಅಂದರೆ ವಕೀಲರ ಸಂಘದ ಅಧ್ಯಕ್ಷರು ಆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಅಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಜಿಲ್ಲಾ ನ್ಯಾಯಾಧೀಶರು ಭಾಗವಹಿಸುತ್ತಾರೆ. ಆ ಕಟ್ಟಡದ ಉದ್ಘಾಟನಾ ಕಾರ್ಯಕ್ರಮಕ್ಕೆ ನಮ್ಮ ಲೋಕೋಪಯೋಗಿ ಸಚಿವರೂ ಕೂಡ ಭಾಗವಹಿಸಿ ಉದ್ಘಾಟನೆ ಮಾಡುತ್ತಾರೆ. ದಿನಾಂಕ: 16.03.2012ಕ್ಕೆ ಈ ವಿಚಾರದ ಬಗ್ಗೆ ನಾನು ಲೋಕೋಪಯೋಗಿ ಇಲಾಖೆಯ ಸಚಿವರ ಗಮನಕ್ಕೆ ತಂದೆ. "ಬಿ.ಸಿ. ಪಾಟೀಲ್ ಇವತ್ತು ಶಾಸಕನಾಗಿರಬಹುದು, ಇಲ್ಲದಿರಬಹುದು, ನೀವು ಮಂತ್ರಿಗಳಾಗಿರಬಹುದು, ಇಲ್ಲದಿರಬಹುದು, ಆದರೆ ಇದೊಂದು ಸಂಪ್ರದಾಯ. ಒಬ್ಬ ಸ್ಥಳೀಯ ಶಾಸಕ ತಾಲ್ಲೂಕಿನ ಪ್ರಥಮ ಪ್ರಜೆ. ಒಬ್ಬ ಪ್ರಥಮ ಪ್ರಜೆಗೆ ಶಿಷ್ಟಾಚಾರ ಉಲ್ಲಂಘನೆ ಮಾಡಿ ಅವರು ಈ ರೀತಿ ವಕೀಲರ ಸಂಘದ ಅಧ್ಯಕ್ಷರನ್ನು ಕಾರ್ಯಕ್ರಮದ ಅಧ್ಯಕ್ಷರನ್ನಾಗಿ ಮಾಡುವುದು ತಪ್ಪಾಗುತ್ತದೆ" ಎಂದು ನಾನು ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ತಂದಾಗ ಅವರು "ನಾನು ಯಾವುದೇ ನಿರ್ಧಾರವನ್ನು ಮಾಡುವುದಕ್ಕಾಗುವುದಿಲ್ಲ, ನೀನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತೆಗೆದುಕೊಂಡು ಬಾ, .ಇದರ

ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು clarification ಕೊಡಲಿ" ಎಂದು ಹೇಳಿದ ಮಾನ್ಯ ಮಂತ್ರಿಗಳು ಆ ಕಾರ್ಯಕ್ರಮದಲ್ಲಿ ದಿನಾಂಕ 17 ರಂದು ಭಾಗವಹಿಸಿದ್ದರು. ಆದರೆ ನಾನು ಆ ಕಾರ್ಯಕ್ರಮಕ್ಕೆ ಹೋಗಲಿಲ್ಲ. ನಾನು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟೆ. ಇದು ಒಬ್ಬ ಶಾಸಕರ ಸ್ಥಾನಕ್ಕೆ ಅವಮರ್ಯಾದೆ ಮಾಡಿದ ಹಾಗೆ ಆಗಿದೆ. ಆದ್ದರಿಂದ ಇದು ಇಡೀ ತಾಲ್ಲೂಕಿನ ಜನರಿಗೆ ಆಗಿರುವ ಅವಮರ್ಯಾದೆಯಾಗಿದೆ, ಹಾಗಾಗಿ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ, ಏಕೆಂದರೆ ಕಾರ್ಯಕ್ರಮಕ್ಕೆ ಜಿಲ್ಲಾ ನ್ಯಾಯಾಧೀಶರು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಭಾಗವಹಿಸುವಾಗ, ನಾವು ಅಲ್ಲಿಗೆ ಹೋಗಿ ಕಾರ್ಯಕ್ರಮವನ್ನು ನಿಲ್ಲಿಸುವುದು ತಪ್ಪಾಗುತ್ತದೆ, ಅಗೌರವ ಸೂಚಿಸಿದ ಹಾಗೆ ಆಗುತ್ತದೆಂದು, ನ್ಯಾಯಾಂಗಕ್ಕೆ ನಾನು ಗೌರವವನ್ನು ಕೊಟ್ಟುಕೊಂಡು ಬಂದಿದ್ದೇನೆ. ಇಲ್ಲಿ ನಾನು ಕೇಳುವಂಥದ್ದು ಏನೆಂದರೆ, ಯಾವುದೇ ಪಕ್ಷದ ಶಾಸಕರಾಗಿರಬಹುದು, ಯಾರೇ ಇರಬಹುದು. ಇದು ಎಲ್ಲಾ ಶಾಸಕರ ಮರ್ಯಾದೆಯ ಗೌರವದ ಪ್ರಶ್ನೆ. ತಮ್ಮ ಮೂಲಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಸ್ಪಷ್ಟವಾದಂಥ ನಿರ್ದೇಶನ ಮತ್ತು ಸ್ಪಷ್ಟವಾದಂಥ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೆ, ಉಚ್ಚ ನ್ಯಾಯಾಲಯದ ನ್ಯಾಯಾಧಿಪತಿಗಳು ಬಂದ ತಕ್ಷಣ, ನಾವು ಶಾಸಕರುಗಳು ಅಧ್ಯಕ್ಷತೆ ವಹಿಸಿದರೆ, ಅದು ರಾಜಕೀಯವೆಂದು ಹೇಳುವಂಥ ನಡವಳಿಕೆ ಇದೆಯಲ್ಲಾ, ಇದು ಬಹಳ ಕೆಟ್ಟದ್ದು. ನಾವು ಹಣವನ್ನು ಕೊಡುವವರು, ಯಾರೋ ಒಬ್ಬ ಲಾಯರ್ ಬಂದು ಅಧ್ಯಕ್ಷತೆ ವಹಿಸಿ ಕಾರ್ಯಕ್ರಮವನ್ನು ಮಾಡುವುದಾದರೆ, ನಮಗೆ ಇದಕ್ಕಿಂತ ಅನ್ಯಾಯ ಇನ್ನೊಂದು ಇಲ್ಲವೆನ್ನುವಂಥದ್ದನ್ನು ಸದನದಲ್ಲಿರುವ ಎಲ್ಲಾ ಶಾಸಕರು ಅರ್ಥ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಶ್ರೀ ಗೋಪಾಲಕೃಷ್ಣ ಬೇಳೂರು : ಮಾನ್ಯ ಅಧ್ಯಕ್ಷರೆ, ಇದು ಅವಮಾನವಾಗುತ್ತದೆ.

ಅಧ್ಯಕ್ಷರು : ಯಾರಾದರೂ ಒಬ್ಬರು ಮಾತನಾಡಿ, ಉಳಿದವರು ಕುಳಿತುಕೊಳ್ಳಿ.

ಶ್ರೀ ಪಿ.ಎಂ. ಅಶೋಕ್ : ಮಾನ್ಯ ಅಧ್ಯಕ್ಷರೆ, ನಾವು ಈ ವಿಷಯದ ಬಗ್ಗೆ ಸಾಕಷ್ಟು ಬಾರಿ ಮಾತನಾಡಿದ್ದೇವೆ. ಕಾನೂನು ಸಚಿವರಾಗಿರುವ ಮಾನ್ಯ ಸುರೇಶ್‌ಕುಮಾರ್‌ರವರು last time ಮಾತನಾಡುವಾಗ ಇದನ್ನು ಕಡ್ಡಾಯವಾಗಿ implement ಮಾಡುತ್ತೇವೆಂದು ಹೇಳಿದ್ದರು, ನಾನು ಫೋನ್ ಮಾಡಿದ್ದಾಗ ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಆಗಿರುವಂಥ ಘಟನೆ. ಕೋರ್ಟ್ ಉದ್ಘಾಟನೆಗೆ ನಮ್ಮನ್ನು ಕರೆಯಲಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಒಂದು ನಿರ್ಧಾರವಾಗಬೇಕು ಅಥವಾ ಯಾವುದಾದರೂ ಒಂದು ತೀರ್ಮಾನವಾಗಬೇಕು.

ಶ್ರೀ ವೆಂಕಟರಾವ್ ನಾಡಗೌಡ : ಈ ವಿಷಯ Business Advisory Committee ಯಲ್ಲಿ ಚರ್ಚೆಯಾಗಿದೆ. ಈ ಬಗ್ಗೆ order issue ಮಾಡುತ್ತೇವೆಂದು ಹೇಳಿದರು. ಇನ್ನೂ issue ಆಗಿಲ್ಲ.

ಅಧ್ಯಕ್ಷರು : ಈಗ ಪ್ರಶ್ನೆ ಬಂದಿರುವಂಥದ್ದು, ನ್ಯಾಯಾಧೀಶರೇ ಅಧ್ಯಕ್ಷ ಸ್ಥಾನದಲ್ಲಿದ್ದರು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಆ ಬಗ್ಗೆ ಉತ್ತರವನ್ನು ಆಮೇಲೆ ಹೇಳಲಿ. ಶಾಸಕರ ಹಕ್ಕುಚ್ಯುತಿಯಾಗುತ್ತಿರುವ ವಿಷಯ ಪದೇ ಪದೇ ಈ ಸದನದಲ್ಲಿ ಚರ್ಚೆಯಾಗುತ್ತಿದೆ. ನಾವು ಬಿ.ಎ.ಸಿ. ಸಭೆಯಲ್ಲೂ ಕೂಡ ಈ ಬಗ್ಗೆ ಅನೇಕ ಸಾರಿ ಚರ್ಚೆ ಮಾಡಿದ್ದೇವೆ. ಇದು ಅಂತಿಮವಾಗಬೇಕು, ಕೊನೆಗಾಣಿಸಬೇಕು, ಶಾಸಕರ ಹಕ್ಕುಚ್ಯುತಿ ಆಗಬಾರದೆಂಬ ಕಾರಣಕ್ಕೋಸ್ಕರ ಪದೇ ಪದೇ ಅನೇಕ ಜನ ಶಾಸಕರು ಕೇಳಿದ್ದಾರೆ. ಈಗ ಇಲ್ಲಿ ಮಾನ್ಯ ಬಿ.ಸಿ. ಪಾಟೀಲ್‌ರವರು ಪ್ರಸ್ತಾಪ ಮಾಡಿರುವಂಥ ಪ್ರಶ್ನೆ. ಅವರ ಕ್ಷೇತ್ರದಲ್ಲಿ ಶಾಸಕರನ್ನು ಬಿಟ್ಟು ಅಲ್ಲಿ Bar Association ನ ಅಧ್ಯಕ್ಷರು ಇದ್ದಾರಲ್ಲಾ, ಅವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿದ್ದಾರೆ. ಇದು ಶಾಸಕರಿಗೆ ಮಾಡುವಂಥ ಅಗೌರವ ಅಲ್ಲವೇ? ಇದಕ್ಕೆ ಅವರು ಏನು ಹೇಳುತ್ತಾರೆಂದರೆ, ಇದು Bar Association building, ಇದು ನ್ಯಾಯಾಲಯಕ್ಕೆ ಸಂಬಂಧಪಟ್ಟಿರುವಂಥದ್ದು, High Court ನ್ಯಾಯಾಧೀಶರುಗಳು ಬರುತ್ತಾರೆಂದು ಹೇಳುತ್ತಾರೆ. ಅವರು ಬರುವುದಕ್ಕೆ ನಮ್ಮದು ಏನೂ ತಕರಾರು ಇಲ್ಲ. ನಾವು ನ್ಯಾಯಾಧೀಶರನ್ನು ಕರೆಯ ಬಾರದು, ಅವರು ಬರಬಾರದೆಂದು ಹೇಳುವುದಿಲ್ಲ. ನಮಗೆ ಕೋರ್ಟ್ ಬಗ್ಗೆ ಗೌರವವಿದೆ, ನ್ಯಾಯಾಧೀಶರುಗಳ ಬಗ್ಗೆಯೂ ಕೂಡ ಗೌರವವಿದೆ. ಆದರೆ

ಶಾಸಕರಿಗೆ ಅಗೌರವವಾಗುವಂಥದ್ದು, ಅವರ ಹಕ್ಕಿಗೆ ಚ್ಯುತಿ ಬರುವಂಥ ಕೆಲಸವನ್ನು ಮಾಡುವಂಥದ್ದು ಸರಿಯಲ್ಲ. ಇಲ್ಲಿ ಮಾನ್ಯ ಸದಸ್ಯರಿಗೆ ಸಂಪೂರ್ಣವಾಗಿ ಹಕ್ಕುಚ್ಯುತಿಯಾಗಿದೆ, ಅವಮಾನವಾಗಿದೆ. ಅಲ್ಲಿ Bar Association President ಅಧ್ಯಕ್ಷತೆ ವಹಿಸುತ್ತಾರೆಂದರೆ, ಚುನಾಯಿತ ಪ್ರತಿನಿಧಿಗಳು ಏಕೆ ಇರಬೇಕು? ಆಕ್ಷೇತ್ರದ ಜನರು ಇವರಿಗೆ ಓಟು ಕೊಟ್ಟು ಇಲ್ಲಿಗೆ ಏಕೆ ಕಳುಹಿಸಬೇಕು? ನನಗೆ ಗೊತ್ತಿರುವ ಮಟ್ಟಿಗೆ ಅಲ್ಲಿಗೆ ಕೊಟ್ಟಿರುವಂಥದ್ದು ಸರ್ಕಾರದ ಹಣ ಖರ್ಚು ಆಗಿದೆ. ಈ ಸರ್ಕಾರದ ಹಣವನ್ನು ಖರ್ಚು ಮಾಡಬೇಕಾದರೂ, Bill pass ಮಾಡುವಂಥದ್ದು Legislature. ಅದು ನ್ಯಾಯಾಲಯಕ್ಕೆ ಇರಬಹುದು, Executiveಗೆ ಇರಬಹುದು, Legislature ಗೆ ಇರಬಹುದು, ಯಾವುದಕ್ಕೇ ಇರಬಹುದು. ರಾಜ್ಯದಲ್ಲಿ ಖರ್ಚು ಮಾಡುವಂಥ ಹಣವನ್ನು ಶಾಸನ ಸಭೆ ಮಂಜೂರು ಮಾಡುವಂಥದ್ದು. ಮಾನ್ಯ ಅಧ್ಯಕ್ಷರೆ, ಈ ಶಾಸನ ಸಭೆಯ ಸದಸ್ಯರಿಗೆ ಅವಮಾನವಾದಾಗ, ಅವರಿಗೆ ಹಕ್ಕುಚ್ಯುತಿಯಾದಾಗ, ತಾವು ರಕ್ಷಣೆಗೆ ಬರಬೇಕಾಗುತ್ತದೆ, ಶಾಸಕರ ಹಕ್ಕುಗಳನ್ನು ರಕ್ಷಣೆ ಮಾಡುವಂಥ ಜವಾಬ್ದಾರಿ ತಮ್ಮದು, ಅದಕ್ಕೆ ನಾನು ಪದೇ ಪದೇ ತಮ್ಮಲ್ಲಿ request ಮಾಡಿದ್ದೇನೆ. ನಾವು ಬಿ.ಎ.ಸಿ.ಸಭೆಯಲ್ಲೂ ಕೂಡ ಹೇಳಿದ್ದೇವೆ. ತಾವು ಸರ್ಕಾರಕ್ಕೆ ಚಾಟಿ ಬೀಸುವುದಿಲ್ಲ. ಅವರು ತೀರ್ಮಾನ ಮಾಡುತ್ತೇವೆಂದು ಹೇಳಿ ಎರಡು ವರ್ಷಗಳಾಯಿತು. ತಾವು ಹೇಗೆ ಸುಮ್ಮನೆ ಇದ್ದೀರೆಂದು ಗೊತ್ತಾಗುತ್ತಿಲ್ಲ. ನಾವು ಹೇಗೆ ಇರಬೇಕೆಂದು ಹೇಳಿ. ಅದಕ್ಕೆ ದಯಮಾಡಿ ಇದನ್ನು ಅಂತಿಮ ಗೊಳಿಸಬೇಕು. ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿ, ಇದನ್ನು examine ಮಾಡಿ ಹಕ್ಕುಚ್ಯುತಿಗೆ ಬರುತ್ತದೋ, ಇಲ್ಲವೋ, ಎಂಬುದನ್ನು ತೀರ್ಮಾನ ಮಾಡಲಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಸಿ. ಪಾಟೀಲ್ ರವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಹಿರೇಕೆರೂರಿನ ನ್ಯಾಯಾಲಯ ಸಂಕೀರ್ಣದಲ್ಲಿ ವಕೀಲರ ಭವನ ಉದ್ಘಾಟನೆಯಾಗಿದ್ದು. ಬಹಳ ಮುಂಚಿನಿಂದಲೂ ನ್ಯಾಯಾಲಯದ ಸಮಾರಂಭದಲ್ಲಿ ಆಡಳಿತಾತ್ಮಕ ನ್ಯಾಯಾಧೀಶರು ಯಾರು ಇದ್ದಾರೆ, Administrative Judge of the

District ಇವರು ಒಂದು ಚರ್ಚೆ ಮಾಡಿ, ಅವರೇ ಒಂದು format ready ಮಾಡಿ ಮಾಡುತ್ತಿದ್ದಾರೆ. ಇದರ ಬಗ್ಗೆ ನಾವು ಸಾಕಷ್ಟು ಬಾರಿ ಚರ್ಚೆ ಮಾಡಿದ್ದೇವೆ. ಲೋಕೋಪಯೋಗಿ ಇಲಾಖೆ ಕಟ್ಟಡವನ್ನು ನಮ್ಮ ಹಣದಿಂದ ಕಟ್ಟಿರುವಂಥದ್ದು, ಇದಕ್ಕೆ ಸ್ಥಳೀಯ ಶಾಸಕರನ್ನು ಕರೆಯಬೇಕು. ನಾವು ಸ್ಥಳೀಯ ಶಾಸಕರನ್ನು ಅತಿಥಿಯಾಗಿ ಕರೆಯುತ್ತೇವೆ, ಅಧ್ಯಕ್ಷತೆ ವಹಿಸುವಂಥದ್ದು ನ್ಯಾಯಾಂಗ ಇಲಾಖೆಗೆ ಬಿಟ್ಟಿರುವಂಥದ್ದು ಎಂದು ಇದೆ. ಇದು ನಮ್ಮ ಸರ್ಕಾರ ಬಂದಾಗಿನಿಂದ ಆಗಿರುವಂಥದ್ದಲ್ಲ. ಇದು ಮುಂಚಿನಿಂದಲೂ ನಡೆದುಕೊಂಡು ಬಂದಿರುವಂಥ ವಿಚಾರವಾಗಿದೆ. ಈಗ ಮಾನ್ಯ ಬಿ.ಸಿ. ಪಾಟೀಲ್‌ರವರು ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ, ನಾನು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿದ್ದೇನೆ. ನ್ಯಾಯಾಂಗ ಇಲಾಖೆಯಲ್ಲಿ ಆದರೂ ಕೂಡ ಜನಾದೇಶವನ್ನು ಪಡೆದುಕೊಂಡು ಬಂದಿರುವಂಥ ಸ್ಥಳೀಯ ಪ್ರತಿನಿಧಿಗಳಿಗೆ ಮಹತ್ವ ಸ್ಥಾನ ಕೊಡಬೇಕು, ಅವರಿಗೆ ಅಧ್ಯಕ್ಷತೆ ಕೊಡಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದೆ. ನಾನು ಈ ವಿಚಾರದಲ್ಲಿ ಕೂಡಲೇ ರಾಜ್ಯದ ಮುಖ್ಯ ನ್ಯಾಯಮೂರ್ತಿ, ರಿಜಿಸ್ಟ್ರಾರ್ ಜನರಲ್ ಜೊತೆ ಮಾತನಾಡಿ ಈ ವಿಷಯವನ್ನು ಪ್ರಸ್ತಾಪ ಮಾಡಿ ಸರಿಯಾದ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲಕೃಷ್ಣ ಬೇಳೂರು : ಮಾನ್ಯ ಅಧ್ಯಕ್ಷರೆ, ಯಾವಾಗ ಮಾತನಾಡುವುದು? ನಾಲ್ಕು ವರ್ಷಗಳು ಕಳೆದು ಹೋಯಿತು, ಆ ಕಾರ್ಯಕ್ರಮಕ್ಕೆ ಮಂತ್ರಿಗಳೂ ಹೋಗಬಾರದು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯಲ್ಲಿ ಶಾಸಕರ ಹಕ್ಕಿಗೆ ಚ್ಯುತಿ ಬಂದಾಗ ಮಾರ್ಗದರ್ಶನ ಕೊಡಬೇಕು. ಈ ಕಾರ್ಯಕ್ರಮಕ್ಕೆ ಹಣವನ್ನು ಕೊಡುವವರು ಯಾರು? ನಾವು ಕೊಡದೇ ಹೋದರೆ ಹಣ ಬರುತ್ತದೆಯೇ? ನಾವು 31ನೇ ತಾರೀಖಿನೊಳಗೆ ಕೊಡದಿದ್ದರೆ ಸಂಬಳ ಕೊಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಇಲ್ಲಿ ಪ್ರಶ್ನೆ ಬಂದಿರುವಂಥದ್ದು, Judicial ನಲ್ಲಿ ಅವರೇ ಅಧ್ಯಕ್ಷ ಸ್ಥಾನ.....

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದು ಸಮಂಜಸವಾದ ಉತ್ತರವಲ್ಲ. ಇವರು Chief Justice ಜೊತೆಯಲ್ಲಿ ಮಾತನಾಡಿ, High

Court Registrar ಜೊತೆಯಲ್ಲಿ ಮಾತನಾಡಿ, ನಾವು ತೀರ್ಮಾನ ಮಾಡುತ್ತೇವೆಂದು ಹೇಳುವಂಥದ್ದು ಸರಿಯಲ್ಲ. You have to protect our interest.

ಅಧ್ಯಕ್ಷರು : ಅದಕ್ಕೆ ನಾನು ಹೇಳುತ್ತಿದ್ದೇನೆ, ನಾನು ಹೇಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಅವರಿಗೆ ಹೇಳಿ.

ಅಧ್ಯಕ್ಷರು : ಈ Particular case ನಲ್ಲಿ ಸಾಮಾನ್ಯವಾಗಿ ನಾವು ನೋಡಿದ ಹಾಗೆ ಕೋರ್ಟ್ ಬಿಲ್ಡಿಂಗ್ ಇದ್ದರೆ High Court Judge ಯಾರು ಇರುತ್ತಾರೆ, ಅವರು ಅಧ್ಯಕ್ಷ ಸ್ಥಾನದಲ್ಲಿದ್ದು, ಉದ್ಘಾಟನೆ ಮಾಡುತ್ತಾರೆ. ಆದರೆ ಇಲ್ಲಿ Bar Association President ಮಾಡಿದ್ದಾರೆ, ಇದು ಸರಿಯಲ್ಲ.

ಶ್ರೀ ಸಿದ್ದರಾಮಯ್ಯ : Bar Association President preside ಮಾಡುವುದೆಂದರೆ, ಇದನ್ನು ಇಡೀ ಸದನವನ್ನು tolerate ಮಾಡಬೇಕೆಂದರೆ, ಆ ರೀತಿ ತೀರ್ಮಾನ ಮಾಡುವುದಕ್ಕೆ ಆಗುತ್ತದಾ? ಅದನ್ನು ತಾವು ಒಪ್ಪಿಕೊಳ್ಳುತ್ತೀರಾ?

ಅಧ್ಯಕ್ಷರು : ಇಲ್ಲ.

ಶ್ರೀ ಸಿದ್ದರಾಮಯ್ಯ : ಸರಿ, ಅವರಿಗೆ ಹೇಳಿ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದು ಆದ ಮೇಲೆ ಅವರು clarification ಕೊಟ್ಟಿದ್ದಾರೆ, ಪತ್ರಿಕಾ ಹೇಳಿಕೆ ಕೊಟ್ಟು ಅವರು ಮಾಡಿದ್ದೇ ಸರಿ ಎಂದು ಕೊಟ್ಟಿದ್ದಾರೆ.

ಅಧ್ಯಕ್ಷರು : High Court Judge ರವರೆ ಅಧ್ಯಕ್ಷತೆ ವಹಿಸಿದ್ದರೆ, some how, ಏನೂ ಇಲ್ಲ. ಆದರೆ Bar Association President ಗೆ ಹೇಗೆ ಕೊಟ್ಟರು?

ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅಲ್ಲಿ presided by Bar Association ಅಧ್ಯಕ್ಷರೆಂದು ಕಲ್ಲಿನ ಫಲಕದಲ್ಲಿ ಹಾಕಿ ಬಿಟ್ಟಿದ್ದಾರೆ. ಅದು ಶಾಶ್ವತವಾಗಿ ಇತಿಹಾಸದಲ್ಲಿ ಉಳಿಯುತ್ತದೆ. ಈಗ ಒಂದು ಸಾರಿ violation ಮಾಡಿ ಕಲ್ಲಿನಲ್ಲಿ ಏನು ಹಾಕಿದ್ದಾರೆ, ಇದು ಶಾಶ್ವತವಾಗಿ ಇತಿಹಾಸದಲ್ಲಿ ಉಳಿಯುತ್ತದೆ. ಇದು ಬಹಳ ದೊಡ್ಡ ತಪ್ಪಾಗುತ್ತದೆ. ಮುಂದಿನ ಪೀಳಿಗೆಗೆ ಇದು ಒಂದು ಉದಾಹರಣೆಯಾಗುತ್ತದೆ. ಹಿಂದೆ ಇಂಥ ಕಾಲದಲ್ಲಿ

ಇಂಥವರು ಅಧ್ಯಕ್ಷತೆಯನ್ನು ವಹಿಸಿದ್ದರು ಎಂದು ಆಗುತ್ತದೆ. ಇದು approval ಆಗುತ್ತದೆ. ನಮಗೆ ಹಕ್ಕುಚ್ಯುತಿಯಾಗುತ್ತದೆ. ಇದು ಎಲ್ಲಾ ಶಾಸಕರ ಗೌರವದ ಪ್ರಶ್ನೆ, ಇದರ ಬಗ್ಗೆ ಸ್ಪಷ್ಟವಾಗಿ ನಮ್ಮ ಹಕ್ಕುಚ್ಯುತಿಯಾಗಿದೆ, ನಮಗೆ ಅಗೌರವವಾಗಿದೆ, ನಮಗೆ ನ್ಯಾಯ ಒದಗಿಸಬೇಕು. ಶಾಸಕರಿಗೆ ಗೌರವ ಕೊಡುವಂಥ ಪದ್ಧತಿ ಬರಬೇಕು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಸಭಾಧ್ಯಕ್ಷರೆ, ಹಿಂದೆ ಕೂಡ ನಾವು ಹಲವಾರು ಕೋರ್ಟ್ ಕಟ್ಟಡಗಳ ಉದ್ಘಾಟನಾ ಸಮಾರಂಭವನ್ನು ನೋಡಿದ್ದೇವೆ. ಸಾಮಾನ್ಯವಾಗಿ, High Court Judge ಅಥವಾ Administration Heads ಯಾರಾದರೂ ಅದರ ಅಧ್ಯಕ್ಷತೆ ವಹಿಸಿ ಮಾಡಿರುವುದನ್ನು ನಾವು ನೋಡಿದ್ದೇವೆ. ಆದರೆ ಇದೊಂದು ವಿಶೇಷ ಪ್ರಕರಣವೆಂದು ನಮಗೂ ಅನ್ನಿಸುತ್ತದೆ. ಏಕೆಂದರೆ, Bar Associationನ ಅಧ್ಯಕ್ಷರು ಅಲ್ಲಿ ಕಾರ್ಯಕ್ರಮವನ್ನು ಮಾಡಿದ್ದಾರೆ. ಇದುವರೆಗೂ ಈ ರೀತಿ Bar Associationನ ಅಧ್ಯಕ್ಷರು ಮಾಡಿರುವುದು ನಮ್ಮ ಗಮನದಲ್ಲಿಲ್ಲ. ಇದು ಒಂದು ವಿಶೇಷ ಪ್ರಕರಣವಾಗಿದೆ. ನಿಜ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಬ್ಬ ಶಾಸಕನಿಗಿರುವಂಥ ಹಕ್ಕಿಗೆ ಸ್ವಲ್ಪ ಮಟ್ಟಿಗೆ ಚ್ಯುತಿ ಬಂದಿದೆ ಎಂದು ಮೇಲ್ನೋಟಕ್ಕೆ ಅನಿಸುವ ಹಾಗೆ ಕಾಣುತ್ತಿದೆ. ಆದರೂ, ಇದು ನ್ಯಾಯಾಂಗಕ್ಕೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ, ಇದು ವಿಶೇಷ ಪ್ರಕರಣವಾಗಿರುವ ಹಿನ್ನೆಲೆಯಲ್ಲಿ ಇದರ ಬಗ್ಗೆ ನಮ್ಮ ಕಾನೂನು ಮಂತ್ರಿಯವರು Chief Justice ರವರ ಹತ್ತಿರ ಮಾತನಾಡಿ, ವಿಚಾರವೇನು ಎನ್ನುವುದನ್ನು ತಿಳಿದುಕೊಂಡು ಮತ್ತೆ ಸದನಕ್ಕೆ ಬಂದು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಅಪೇಕ್ಷೆ.

ಶ್ರೀ ಗೋಪಾಲಕೃಷ್ಣ ಬೇಳೂರು : ನನ್ನ ತಾಲ್ಲೂಕಿನಲ್ಲೂ ಈ ರೀತಿ ಒಂದು ಆಗಿದೆ. ನನ್ನ ತಾಲ್ಲೂಕಿನಲ್ಲೂ ನನ್ನನ್ನೂ ಕರೆದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ಸರ್ಕಾರ ನಿರ್ಧಾರ ತೆಗೆದು ಕೊಳ್ಳಬೇಕು ಸ್ವಾಮಿ. ಶಿಷ್ಟಾಚಾರ ಇರಬೇಕೋ ಬೇಡವೋ? ಬೇಡವೆಂದರೆ ಬೇಡವೆಂದು ಹೇಳಿ. ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗ ಈ ಮೂರೂ ಸಹ ಸಂವಿಧಾನದಲ್ಲಿ ಸ್ವತಂತ್ರವಾಗಿ ಕೆಲಸ ಮಾಡುವಂಥ ಅಂಗಗಳು. ಒಬ್ಬರ ಮೇಲೆ ಒಬ್ಬರು ಸವಾರಿ ಮಾಡಲು ಸಾಧ್ಯವಾಗುವುದಿಲ್ಲ.

ಸಮನ್ವಯ ಇರಬೇಕು ಅಷ್ಟೇ. ಆದರೆ, Legislature ಮೇಲೆ ಸವಾರಿ ಮಾಡಿ, ಅವರ ಹಕ್ಕನ್ನು ಚ್ಯುತಿ ಮಾಡಬೇಕೆಂದು ಸಂವಿಧಾನದಲ್ಲಿ ಎಲ್ಲಿಯೂ ಕೂಡ ಹೇಳಿಲ್ಲ. ಯಾವ ಕಾನೂನಿನಲ್ಲಿಯೂ ಕೂಡ ಹೇಳಲಿಕ್ಕೆ ಸಾಧ್ಯವಿಲ್ಲ. ಇಲ್ಲಿ Bar Association President preside ಮಾಡುವುದು, ಎಂ.ಎಲ್.ಎ. ಹೊರಗಡೆ ಇರುವುದು ಸರಿಯೇ ಎನ್ನುವುದನ್ನು ನೀವೇ ಹೇಳಬೇಕು. ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಿ, ಅಲ್ಲಿ ಚರ್ಚೆಯಾಗಲಿ, Let them come out with the recommendations. ಅವರು ಏನು ತೀರ್ಮಾನ ಮಾಡುತ್ತಾರೋ ಮಾಡಲಿ, ರೆಫರ್ ಮಾಡಿ. ಇದು ನ್ಯಾಯಾಂಗಕ್ಕೆ ಸಂಬಂಧಪಟ್ಟದ್ದು ಎಂದು ಹೇಳಿ ನಮ್ಮ ಹಕ್ಕುಗಳಿಗೆ ಚ್ಯುತಿ ಬರುವುದನ್ನು ನಾವು ಒಪ್ಪುವುದಿಲ್ಲ. ನಾವೂ ಸಹ ವಕೀಲರಾಗಿದ್ದವರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಹಕ್ಕುಗಳಿಗೆ ಚ್ಯುತಿ ಮಾಡುವುದನ್ನು ಒಪ್ಪಲಿಕ್ಕೆ ನಾವು ತಯಾರಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಇವತ್ತು ಸದನದ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಇಚ್ಛೆಪಡುತ್ತೇನೆ. ನಮ್ಮ ಚನ್ನಗಿರಿಯಲ್ಲಿ ಒಂದು ಕೋರ್ಟ್ ಕಟ್ಟಡವನ್ನು ಕಟ್ಟಿದರು. ಮಾನ್ಯ ಕುಮಾರ್‌ರವರು Administrative Judge ಆಗಿದ್ದರು. ಆ ಸಂದರ್ಭದಲ್ಲಿ ನಾನು ವಿದೇಶಕ್ಕೆ ಹೋಗಬೇಕಾಗಿತ್ತು. ಅವರು ಕಟ್ಟಡದ ಉದ್ಘಾಟನೆಗೆ ದಿನಾಂಕವನ್ನು ನಿಗದಿಪಡಿಸಿದ್ದರು. ನಾನು ಕಾನೂನು ಸಚಿವರ ಮೂಲಕ ಮತ್ತು ನೇರವಾಗಿ ಕುಮಾರ್‌ರವರ ಹತ್ತಿರ ಮಾತನಾಡಿದೆ. ನಾನು ಈ ಕ್ಷೇತ್ರದ ಶಾಸಕನಾಗಿದ್ದು, ನನ್ನ ಅಧ್ಯಕ್ಷತೆಯಲ್ಲಿಯೇ ಈ ಕೋರ್ಟ್ ಕಟ್ಟಡದ ಉದ್ಘಾಟನೆಯಾಗಬೇಕು, ಆದ್ದರಿಂದ ನಾನು ವಿದೇಶಕ್ಕೆ ಹೋಗಿಬರುವವರೆಗೂ ಯಾವುದೇ ಕಾರಣಕ್ಕೂ ಈ ಸಮಾರಂಭ ನಡೆಯಲು ನಾನು ಬಿಡುವುದಿಲ್ಲ ಎಂದು ಹೇಳಿದೆ. ಈ ಬಗ್ಗೆ ನಾನು ಕಾನೂನು ಸಚಿವರ ಜೊತೆ ಮಾತನಾಡಿದಾಗ, ಅವರು ರಿಜಿಸ್ಟ್ರಾರ್ ರವರ ಜೊತೆ ಮಾತನಾಡಿ, ನಾನು ವಿದೇಶದಿಂದ ಬಂದ ಮೇಲೆಯೇ, ನನ್ನ ಅಧ್ಯಕ್ಷತೆಯಲ್ಲಿಯೇ ಆ ಕಟ್ಟಡದ ಉದ್ಘಾಟನೆಯನ್ನು ಮಾಡಿದರು. ಅದಕ್ಕೆ ನಮ್ಮ ಕಾನೂನು ಸಚಿವರೂ ಸಹ ಬಂದಿದ್ದರು. ಯಾವುದೇ ಶಾಸಕರಿಗೂ ಸಹ ಅಗೌರವವಾಗಬಾರದು. ಯಾವುದೇ ತಾಲ್ಲೂಕಿನಲ್ಲಿ ಏನೇ ಸಭೆ

ಸಮಾರಂಭಗಳು ನಡೆದರೂ ಅಲ್ಲಿನ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯಬೇಕು. ಈ ಬಗ್ಗೆ ಈ ವಿಧಾನಸಭೆ ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು ಮತ್ತು ಮುಖ್ಯ ನ್ಯಾಯಮೂರ್ತಿಗಳಿಗೆ ಒಂದು ಸ್ಪಷ್ಟ ಸಂದೇಶವನ್ನು ಈ ಸಭೆ ಕಳುಹಿಸಿಕೊಡಬೇಕು ಎಂದು ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಏನೊಂದು ಪ್ರಸ್ತಾಪ ನಮ್ಮ ಮುಂದೆ ಇದೆ, ಇದು ಅನೇಕ ವರ್ಷಗಳಿಂದಲೂ ನಡೆದುಕೊಂಡು ಬರುತ್ತಿದ್ದು, ಕೋರ್ಟ್ ಕಟ್ಟಡಗಳನ್ನು ಉದ್ಘಾಟನೆ ಮಾಡುವಂಥ ಸಂದರ್ಭಗಳಲ್ಲಿ ಸ್ಥಳೀಯ ಶಾಸಕರ್ಯಾರನ್ನೂ ಪ್ರಿಸೈಡ್ ಮಾಡಲು ಬಿಡುತ್ತಿರಲಿಲ್ಲ. ನಮ್ಮ ಬಂಗಾರಪೇಟೆಯಲ್ಲೂ ಆದಂಥ ಸಂದರ್ಭದಲ್ಲಿ ಚೀಫ್ ಜಸ್ಟೀಸ್‌ರವರು ಬಂದಿದ್ದರು. ಆ ಭಾಗದ ಶಾಸಕರನ್ನೂ ಕರೆದಾಗ, ಅವರು ಅಬ್ಜಕ್ಷನ್ ಮಾಡಿದರು, ಹಾಗೆ ಮಾಡಲು ಬರುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಆದ್ದರಿಂದ, ಇದರ ಬಗ್ಗೆ ತಾವು ಗಮನ ಹರಿಸಬೇಕು. ಈ ಸದನ ಗಮನ ಹರಿಸಬೇಕು. ಇರತಕ್ಕಂಥ ಜಿಜ್ಞಾಸೆಯನ್ನು ಪರಿಹರಿಸಬೇಕು. ತಾಲ್ಲೂಕು ಮಟ್ಟದಲ್ಲಿ ಒಂದು ಕೋರ್ಟ್ ಕಟ್ಟಡವನ್ನು ಉದ್ಘಾಟನೆ ಮಾಡುವಂಥ ಸಂದರ್ಭದಲ್ಲಿ High Court Justice ಅಥವಾ Chief Justice ಬಂದಾಗ ಶಾಸಕರನ್ನು ಸರಿಯಾಗಿ ನಡೆಸಿಕೊಳ್ಳದೇ ಇರುವಂಥ ಇತಿಹಾಸ ನಡೆಯುತ್ತಿದೆ. ಅದರ ಬಗ್ಗೆ ನಾವು ಅನೇಕ ಬಾರಿ ಮಾತನಾಡಿದ್ದೇವೆ. ಇದರ ಬಗ್ಗೆ ಕಾನೂನು ಮಂತ್ರಿಗಳು Chief Justice ಜೊತೆ ಮಾತನಾಡುತ್ತಾರೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ಮಾಡಿ, ಇದಕ್ಕೊಂದು ತೆರೆ ಎಳೆಯಬೇಕು ಎನ್ನುವ ವಿನಂತಿಯನ್ನು ನಾನು ಸದನಕ್ಕೆ ಮಾಡುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಬೆಳಗ್ಗೆ exercise ಮಾಡಿದ್ದೇವೆ, ಈಗಲೂ ಮಾಡಿಸಬೇಡಿ. (ತಾವು ಉತ್ತರ ಕೊಡಲು ಎದ್ದಾಗಲೆಲ್ಲಾ ಬೇರೆ ಬೇರೆ ಸದಸ್ಯರು ಮಾತನಾಡಲು ಎದ್ದು ನಿಲ್ಲುತ್ತಿದ್ದುದರಿಂದ ಸಚಿವರು ಪದೇಪದೇ ಎದ್ದು-ಕುಳಿತು ಮಾಡಬೇಕಾದುದರಿಂದ ಈ ರೀತಿ ಹೇಳಿದರು).

Dr. H.C. MAHADEVAPPA : In your own interest, we are giving you some exercise here also. So that your blood can circulate, your organs would function properly.

ಮಾನ್ಯ ಅಧ್ಯಕ್ಷರೆ, ನಾನು 1985ನೇ ಇಸವಿಯಲ್ಲಿ ಈ ಮನೆಗೆ ಶಾಸಕನಾಗಿ ಬಂದೆ. ಅಲ್ಲಿಂದ ಇಲ್ಲಿಯವರೆಗೂ ಈ ಕಡೆಯ ಮಾನ್ಯ ಸದಸ್ಯರಿರಬಹುದು, ಆ ಕಡೆಯ ಮಾನ್ಯ ಸದಸ್ಯರಿರಬಹುದು, ಕಾಲಕಾಲಕ್ಕೆ ಬರುವಂಥ ಚುನಾಯಿತ ಪ್ರತಿನಿಧಿಗಳು ಶಿಷ್ಟಾಚಾರದ ಉಲ್ಲಂಘನೆಯಾಗಿದೆ, ಹಕ್ಕುಚ್ಯುತಿಯಾಗಿದೆ ಎನ್ನುವ ಪ್ರಸ್ತಾಪಗಳನ್ನು ಮಾಡುತ್ತಲೇ ಇದ್ದಾರೆ. ಆಯಾ ಕಾಲದ ಸರ್ಕಾರಗಳು ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡುತ್ತವೆ. ಒಂದು ವಿಷಯ ನಮ್ಮೆಲ್ಲರ ಗಮನದಲ್ಲಿರಬೇಕು, in a democratic function, the District in-charge Minister is not an extra-constitutional authority. ಅವರು ಆ ಜಿಲ್ಲೆಯ ಆಗುಹೋಗುಗಳನ್ನು ನೋಡಿಕೊಳ್ಳಲು ನೇಮಕವಾಗಿದ್ದಾರೆ. ಒಂದು ವಿಧಾನಸಬಾ ಕ್ಷೇತ್ರದಲ್ಲಿ ನಡೆಯತಕ್ಕಂಥ ಕಾರ್ಯಕಲಾಪಗಳನ್ನು ಅವರ ಅನುಮತಿಯನ್ನು ತೆಗೆದುಕೊಂಡೇ ಮಾಡಬೇಕು. ಅವರು ಟೈಂ ಕೊಡದಿದ್ದರೆ ಮಾಡುವ ಹಾಗಿಲ್ಲ. ಅಥವಾ ಅವರು ಹೇಳಿದರೆ ಹಾಗೇ ಮಾಡಿಕೊಳ್ಳಬಹುದು, ಇಲ್ಲದಿದ್ದರೆ ಮಾಡುವ ಹಾಗಿಲ್ಲ. ಈ ರೀತಿ sub-servient ಆಗಿ ಕೆಲಸ ಮಾಡುವಂಥ ವ್ಯವಸ್ಥೆ ರಾಜಕೀಯ ಅಥವಾ ಪ್ರಜಪ್ರಭುತ್ವದಲ್ಲಿ ತುಂಬಾ ಅಪಾಯಕಾರಿ, Whether we belong to this side or that side. ಇನ್ನೊಂದು ಸರ್ಕಾರ ಒಂದು ಮಠದ ಆದೇಶದಂತೆ ಕೆಲಸ ಮಾಡುತ್ತದೆ. ಕಾರ್ಯಕ್ರಮಗಳನ್ನು fix ಮಾಡಿಬಿಟ್ಟಿರುತ್ತಾರೆ, ಅದಕ್ಕೆ ಎಂ.ಎಲ್.ಎ.ಗಳನ್ನು ಕರೆಯುವುದೇ ಇಲ್ಲ. ಅವರೇ ಹೋಗಿ ಕಾರ್ಯಕ್ರಮವನ್ನು ಮಾಡಿಯೇ ಬಿಡುತ್ತಾರೆ. ಅಥವಾ ಇನ್ಯಾರೋ ಒಬ್ಬರು Industrialist ಇರಬಹುದು, ಪ್ರಜಾಪ್ರಭುತ್ವದ ಆಧಾರಸ್ಥಂಭಗಳಿರಬಹುದು, ಅವರ ಪ್ರಭಾವಕ್ಕೆ ಒಳಗಾಗಿ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿರ್ಣಾಯಕ ಸ್ಥಾನವನ್ನು ವಹಿಸತಕ್ಕಂಥ ರಾಜಕೀಯ ಅಧಿಕಾರ sub-servient ಆಗಿ ಕೆಲಸ ಮಾಡಿದರೆ ನಾವು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿದ ಹಾಗೆ ಆಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದು "ಸಂತೆ" ಎನ್ನುವ ಒಂದು ಕಾರ್ಯ ಕ್ರಮವನ್ನು ಮಾಡಿದರು. ಮಾನ್ಯ ಮುಖ್ಯಮಂತ್ರಿಗಳು ನಮ್ಮ ನಮ್ಮ ಜಿಲ್ಲೆಗಳಿಗೆ ಬಂದು ಸಭೆ ಮಾಡಿದರೆ ಅದು ನಮಗೆಲ್ಲ ಹೆಮ್ಮೆ, ಸಂತೋಷ. ಅವರು ಒಂದು ಪಕ್ಷಕ್ಕೆ ಮಾತ್ರ ಮುಖ್ಯಮಂತ್ರಿಯಲ್ಲ, ಅವರು ನಮ್ಮೆಲ್ಲರಿಗೂ ಕೂಡ ಮುಖ್ಯಮಂತ್ರಿ, ಇಡೀ ರಾಜ್ಯದ ಮುಖ್ಯಮಂತ್ರಿ. ಅವರನ್ನು ನಾವು

ಸಂತೋಷದಿಂದ ಸ್ವಾಗತ ಮಾಡಿ ನಮ್ಮ ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತೇವೆ. ಆದರೆ ಎಲ್ಲ ಕಾರ್ಯಕ್ರಮಗಳಿಗೆ ಅವರನ್ನು ಕರೆದುಕೊಂಡು ಬರುತ್ತೇವೆ ಎಂದರೆ, democratic functioning is not a 'ಸಂತೆ'. ನೀವು ಎಲ್ಲ ಕ್ಷೇತ್ರಗಳಿಗೆ ಹೋಗಿ, ಜನರನ್ನು ಸೇರಿಸಿ, ಅಭಿವೃದ್ಧಿಯನ್ನು ನೋಡಿ, ಅಲ್ಲಿಯ ಜನಪ್ರತಿನಿಧಿಯ ಹಕ್ಕನ್ನು ಪ್ರತಿಪಾದನೆ ಮಾಡಿ, ಅದರಂತೆ ನಡೆದುಕೊಳ್ಳುವುದೇ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಂಥಾದ್ದು. ಕಾಲಕಾಲಕ್ಕೆ, whether this Government or previous Government or any Government that is going to be established in future course, ಅವರು ಶಿಷ್ಟಾಚಾರ ಮತ್ತು ಹಕ್ಕನ್ನು ರಕ್ಷಣೆ ಮಾಡತ್ಕಕಂಥ ನಿರ್ದಿಷ್ಟವಾದಂಥ ನಿಯಮಗಳನ್ನು ಮಾಡದೇ ಹೋದರೆ, ಯಾರೋ ಒಬ್ಬರು ಅಧ್ಯಕ್ಷರು, ಯಾವುದೋ ಒಂದು ಸಮಿತಿಯ ಸದಸ್ಯರು ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸುತ್ತಾರೆ ಎಂದರೆ ಅವರು ಮೇಲೆ ಇರುತ್ತಾರೆ, ಎಂ.ಎಲ್.ಎ. ಕೆಳಗಡೆ ಇರುತ್ತಾರೆ. ಅವರನ್ನು ಕೇಳದೇ ಇವರು ಯಾವುದೇ ಕಾರ್ಯಕ್ರಮವನ್ನೇ ಫಿಕ್ಸ್ ಮಾಡುವ ಹಾಗಿಲ್ಲ. ಅವರ ಸರ್ಕಾರವಿದ್ದರೆ ಅವರನ್ನು ಕೇಳಬೇಕು, ಈ ಕಡೆ ಇದ್ದವರ ಸರ್ಕಾರ ಬಂದರೆ ಇವರನ್ನು ಕೇಳಬೇಕು. ಈ ರೀತಿಯ ದ್ವಂದ್ವಗಳನ್ನು ಸೃಷ್ಟಿ ಮಾಡಿಕೊಂಡು, ಇಲ್ಲಿರುವ 224 ಜನ ಮಾನ್ಯ ಚುನಾಯಿತ ಸದಸ್ಯರ ಶಿಷ್ಟಾಚಾರವನ್ನು ಮತ್ತು ಹಕ್ಕನ್ನು ಉಲ್ಲಂಘನೆ ಮಾಡದ ರೀತಿಯಲ್ಲಿ ಈ ಮನೆಯಲ್ಲಿ ಒಂದು ನಿರ್ದಿಷ್ಟವಾದಂಥ ಮತ್ತು ಸ್ಪಷ್ಟವಾದಂಥ ತೀರ್ಮಾನ ತೆಗೆದುಕೊಂಡು ಶಿಷ್ಟಾಚಾರ ಉಲ್ಲಂಘನೆ ಯಾಗದ ರೀತಿಯಲ್ಲಿ ಮತ್ತು ಹಕ್ಕುಚ್ಯುತಿಯಾಗದ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ನಿರ್ದಿಷ್ಟವಾಗಿ ಪ್ರಜಾಪ್ರಭುತ್ವದ ಆಧಾರಸ್ಥಂಭಗಳು ಅವರಿಗೆ ಸಂವಿಧಾನದಲ್ಲಿ ಕೊಟ್ಟಿರುವ ಜವಾಬ್ದಾರಿಯಂತೆ ಕೆಲಸ ಮಾಡಿ, ಒಬ್ಬರಿಗೊಬ್ಬರು ಜಗಳವಾಡದ ರೀತಿಯಲ್ಲಿ ನಡೆದುಕೊಂಡರೆ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ, ಅಭಿವೃದ್ಧಿ ಮಾಡುವ ಬದಲು ಗೊಂದಲ ವನ್ನು ಸೃಷ್ಟಿ ಮಾಡಿ ಅನಾವಶ್ಯ ರಾಜಕೀಯವನ್ನು ತೂರಿಸಿ ಜನಪ್ರತಿನಿಧಿಗಳಿಗೆ ಅಗೌರವ ಮತ್ತು ಅವಮಾನವನ್ನು ತರುವುದು ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಗೌರವ ತರುವಂಥಾದ್ದಲ್ಲ, ಅದು ಆರೋಗ್ಯಕರವಾದಂಥ ಬೆಳವಣಿಗೆಯಲ್ಲ. ಆ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಾನೂನು ಸಚಿವರು ಚರ್ಚೆ ಮಾಡಿ, ಒಂದು ನಿರ್ದಿಷ್ಟವಾದ ರಾಜಕೀಯ

ತೀರ್ಮಾನವನ್ನು ರಾಜ್ಯಾಂಗದ ಕೆಳಗೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ಈ ಬಗ್ಗೆ ಚರ್ಚೆಯಾಗಿದ್ದರೂ ಸಹ, ಇಂದಿಗೂ ಈ ಬಗ್ಗೆ ಚರ್ಚೆ ನಡೆಯುತ್ತಿರುವುದು ಆರೋಗ್ಯಕರವಾದ ಬೆಳವಣಿಗೆಯಲ್ಲ. ನಾವು ಹೇಳುತ್ತಿರುವುದರಲ್ಲಿ ಯಾವುದೇ ರಾಜಕೀಯ ಉದ್ದೇಶವಿಲ್ಲ, ಯಾರನ್ನೂ ಉದ್ದೇಶಿಸಿ ಮಾತನಾಡುವಂಥಾದ್ದಿಲ್ಲ, ಇಲ್ಲಿರುವ ಎಲ್ಲಾ 224 ಜನ ಸದಸ್ಯರ ಗೌರವವನ್ನು ಮತ್ತು ಅವರ ಹಕ್ಕನ್ನು ರಕ್ಷಣೆ ಮಾಡುವಂಥ ತೀರ್ಮಾನವನ್ನು ಸರ್ಕಾರ ಪ್ರಕಟ ಮಾಡಬೇಕು. ಅವರು ಯಾವ ಕಡೆಯೇ ಇರಲಿ, ಅದನ್ನು ಮಾಡಿಕೊಂಡು ಹೋಗಬೇಕು ಎನ್ನುವ ನಿರ್ದಿಷ್ಟವಾದ ಸೂಚನೆಯನ್ನು ಸರ್ಕಾರ ಕೊಡಬೇಕು. ಸಂವಿಧಾನದ ಕೆಳಗೆ ಎಲ್ಲರೂ ಕೆಲಸ ಮಾಡಬೇಕೇ ಹೊರತು, nobody is above the Constitution. ಇದನ್ನು ಅರ್ಥಮಾಡಿಕೊಂಡು ನಾವು ಕೆಲಸ ಮಾಡಿದರೆ ಪ್ರಜಾಪ್ರಭುತ್ವಕ್ಕೆ ಗೌರವ ತಂದುಕೊಡುತ್ತೇವೆ, ನಮ್ಮ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ನಡೆಯುತ್ತದೆ ಎಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮಹದೇವಪ್ಪನವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಈಗ ಎಲ್ಲ ಎಂ.ಎಲ್.ಎ.ಗಳು ಇದ್ದಾರೆ, ಮಾನ್ಯ ಮುಖ್ಯಮಂತ್ರಿಗಳೂ ಇದ್ದಾರೆ. ಇತ್ತೀಚೆಗೆ ನೀವು ನಮ್ಮ ಮೈಸೂರು ಜಿಲ್ಲೆಗೆ ಒಂದು ಸಂತೆಗೆ ಬಂದಿದ್ದಿರಿ. ನಮ್ಮ ಜಿಲ್ಲಾ ಮಂತ್ರಿಗಳು "ಸವಲತ್ತುಗಳ ಸಂತೆ" ಎನ್ನುವ ಒಂದು ಸಂತೆಯನ್ನು ಏರ್ಪಾಡು ಮಾಡಿದ್ದರು. ಸಂತೆ ಎನ್ನುವ ಪದವೇ ನನಗೆ ಹಾಸ್ಯಾಸ್ಪದವಾಗಿ ತೋರುತ್ತದೆ. ತೆಗೆದುಕೊಳ್ಳುವ, ಕೊಂಡುಕೊಳ್ಳುವ ಜಾಗಕ್ಕೆ ಸಂತೆ ಎಂದು ಹೇಳುತ್ತಾರೆ. ನನಗೆ ಗೊತ್ತಿರುವ ಹಾಗೆ ಜಿಲ್ಲಾ ಮಂತ್ರಿಗಳನ್ನು ಶಾಸಕರು ಅವರವರ ಕ್ಷೇತ್ರಕ್ಕೆ ಕಡ್ಡಾಯವಾಗಿ ಕರೆಯಬೇಕೆಂದು ಯಾವ protocol ಇಲ್ಲ. But he cannot interfere with the functioning of the MLAs. That is the protocol here. ಇವರು ಇಡೀ ಜಿಲ್ಲೆಯ ಸವಲತ್ತುಗಳನ್ನು ವಿತರಣೆ ಮಾಡುತ್ತೇವೆಂದು ಮುಖ್ಯಮಂತ್ರಿಯವರನ್ನೂ ಕರೆದುಕೊಂಡು ಹೋಗಿ ತಮ್ಮನ್ನೂ ತಪ್ಪು ದಾರಿಗೆಳೆಯುವ ಕೆಲಸ ಮಾಡಿದ್ದಾರೆ. ಇವರು ನನ್ನ ಕ್ಷೇತ್ರದಲ್ಲಿ ಸವಲತ್ತುಗಳನ್ನು ಹಂಚುವ ಕಾರ್ಯಕ್ರಮದಲ್ಲಿ ಯಾರು preside ಮಾಡಬೇಕು? ನಾನಾ ಅಥವಾ ಜಿಲ್ಲಾಮಂತ್ರಿ preside ಮಾಡಬೇಕೇ? ಡಾ: ಹೆಚ್.ಸಿ. ಮಹದೇವಪ್ಪನವರ ಕ್ಷೇತ್ರದಲ್ಲಿ ಸವಲತ್ತುಗಳನ್ನು ಹಂಚುವ ಕಾರ್ಯಕ್ರಮದ ಆ

ಶಾಸಕರು preside ಮಾಡಬೇಕೆ ಅಥವಾ ಯಾರು preside ಮಾಡಬೇಕು? ಶಾಕರು preside ಮಾಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಬೇಕು.

ಶ್ರೀ ಸಿದ್ದರಾಮಯ್ಯ : ಬಚ್ಚೇಗೌಡರವರೆ ಆ ರೀತಿ ಆಗಿಲ್ಲ, ಅದಕ್ಕೇ ನಾನು ಪದೇ ಪದೇ ಹೇಳುತ್ತಿದ್ದೇನೆ. Boards and Corporations Chairman ಮಾಡಿದ್ದೀರಿ, ಅವರಿಗೆ cabinet rank ಸೌಲಭ್ಯ ಕೊಟ್ಟಿದ್ದೀರಿ. ಅವರನ್ನು ವಿರೋಧ ಪಕ್ಷದ ನಾಯಕರಿಗಿಂತಲೂ ಮೇಲೆ ಹಾಕುತ್ತೀರಿ. He is a defeated man. ಅವರು ಅವರ constituency ಯಲ್ಲಿ ಸೋತಿದ್ದಾರೆ. ಆದರೂ ಕೂಡ ಶಾಸಕರ ಮೇಲೆ ಅವರು ಇರುತ್ತಾರೆ. ಅವರನ್ನು ಜನರು ಸೋಲಿಸಿದ್ದಕೋಸ್ಕರ ಹಾಲಿ ಇರುವ ಶಾಸಕರಿಗಿಂತ ಮೇಲೆ ಹಾಕುತ್ತಿದ್ದೀರಾ? ಅವರನ್ನು Chairman ಮಾಡಿದ ತಕ್ಷಣ, ಈ ಸರ್ಕಾರಕ್ಕೆ ಅಧಿಕಾರ ಇದೆ ಎಂದು ಹೇಳಿ protocol ನಲ್ಲಿ MLA ಗಿಂತ ಅವರು ಮೇಲೆ ಬರುತ್ತಾರೆಯೇ? ಸೋತವರು ಗೆದ್ದವರಿಗಿಂತ ಮೇಲೆ ಬರುತ್ತಾರೆಯೇ? There is no provision as such. Boards and Corporations Chairman ಗಳನ್ನು ಕರೆಯಬೇಕೆಂದು protocol ನಲ್ಲಿ ಎಲ್ಲಿದೆ? ಈ Chiarman ಗಳಿಗೆ ಕೆಂಪು ಲೈಟ್, ಗೂಟದ ಕಾರು, escort ಇದೆ. I have not come across such a thing in the previous Government.

ಶ್ರೀ ಬಿ.ಎನ್. ಬಚ್ಚೇಗೌಡ : ಇವೆಲ್ಲ ಹಿಂದಿನಿಂದಲೇ ಬಂದಿದೆ.

ಶ್ರೀ ಸಿದ್ದರಾಮಯ್ಯ : No, no Chairman ಗಳಿಗೆ ಇರಲಿಲ್ಲ. Boards and Corporations Chairman ಗಳಿಗೆ ಕೇವಲ ಕಾರು ಕೊಡುತ್ತಿದ್ದರು. ಅದು Boards, Corporations ನ ಕಾರು ಆಗಿತ್ತು. ಅದು not a Government car.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಇದು ತಮ್ಮ ಸರ್ಕಾರದ ಕಾಲದಲ್ಲೂ ಇತ್ತು, ಈಗ ನಮ್ಮ ಕಾಲದಲ್ಲಿ ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇಲ್ಲ, ಇಲ್ಲ, I don't agree. ಹಾಗಿದ್ದರೆ ಸರ್ಕಾರದ್ದು ಆ ರೀತಿಯ circular ಇದ್ದರೆ ತಂದು ತೋರಿಸಿ. Notification ಇದ್ದರೆ ತೋರಿಸಿ.

ಡಾ: ಹೆಚ್.ಸಿ. ಮಹದೇವಪ್ಪ : Red light ಅನ್ನು ನಿರ್ದಿಷ್ಟವಾಗಿ ಯಾರ್ಯಾರು ಹಾಕಿಕೊಳ್ಳಬೇಕೆಂಬುದು ಸರ್ಕಾರಕ್ಕೆ ಗೊತ್ತಿದೆ. ಆದರೆ, ಈಗ ಯಾರು ಬೇಕೋ ಎಲ್ಲರೂ red light ಹಾಕಿಕೊಂಡು ಹೋಗುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎನ್ ಬಚ್ಚೇಗೌಡ : ಇದೆ.

ಶ್ರೀ ಸಿದ್ದರಾಮಯ್ಯ : ಇಲ್ಲಾರೀ. ಆ ತರಹ notification ಇಲ್ಲ. Government ನಿಂದ ಆ ತರಹ circular issue ಮಾಡಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಯಾವ ಸರ್ಕಾರದಿಂದಲೂ issue ಮಾಡಿಲ್ಲ. ಹಿಂದೆ ಇತ್ತು ಎಂದು ಅವರು ಹೇಳುವುದಾದರೆ, ಹಾಗಾದರೆ ಅದನ್ನು ಇಲ್ಲಿ ಅವರು place ಮಾಡಲಿ.

ಶ್ರೀ ಬಿ.ಎನ್. ಬಚ್ಚೇಗೌಡ : ಹಿಂದೆ ಜಿಲ್ಲಾ ಪರಿಷತ್ತಿಗೆ status ಕೊಟ್ಟು ಅವರೂ ಕೆಂಪು ದೀಪ ಹಾಕಿಕೊಳ್ಳುತ್ತಿದ್ದರು.

ಶ್ರೀ ಸಿದ್ದರಾಮಯ್ಯ : ನನ್ನ ಪ್ರಕಾರ ಅವರದೂ ಕೂಡ ತಪ್ಪು. It is not a Government. ಜಿಲ್ಲಾ Government ಎಂದು ಕರೆದರೂ ಕೂಡ ಹಾಗಂತ ಹೇಳಿ ಕೆಂಪು ದೀಪ ಯಾರಿಗೆ ಕೊಡಬೇಕು? ಬೇಡ ಎಂದು ಇಟ್ಟುಕೊಳ್ಳೋಣ. ಆದರೆ, ಚುನಾವಣೆಯಲ್ಲಿ ಸೋತವರನ್ನು Chairman ಮಾಡಿದರೆ ಹೇಗೆ? ಅದು ಸರಿಯೇ? ಅವರನ್ನು M.P. ಗಳಿಂದ ಮೇಲಕ್ಕೆ ಹಾಕುತ್ತಾರೆ. ಅವರಿಗೆ cabinet rank ಇದೆ; Chairman ಗೆ cabinet rank ಇದೆ ಎಂದು ಸ್ಥಳೀಯ ಶಾಸಕರಿಗಿಂತ ಮೇಲುಗಡೆ ಹಾಕುತ್ತಾರೆ ಇದು ನನಗೆ ಅರ್ಥವಾಗುತ್ತಿಲ್ಲ. protocol ನನಗೆ ಗೊತ್ತಿರುವ ಮಟ್ಟಿಗೆ ಸರ್ಕಾರದಿಂದ ಆ ತರಹದ್ದು ಯಾವುದೂ ಯಾರ ಕಾಲದಲ್ಲೂ ಕೂಡ issue ಆಗಿಲ್ಲ. ಇದು ಮೊದಲನೆಯ ಅಂಶ. ಎರಡನೆಯದಾಗಿ, ಯಾವುದೋ ಕ್ಷೇತ್ರದಲ್ಲಿ ಶಾಸಕರು ಅಧಿಕಾರಿಗಳ ಜೊತೆ ಸೇರಿ function fix ಮಾಡಿರುತ್ತಾರೆ. ನಂತರ, ಜಿಲ್ಲಾ

ಮಂತ್ರಿಗೆ ಪುರುಸೊತ್ತು. ಇಲ್ಲ, ಆ ಕಾರ್ಯಕ್ರಮವನ್ನು ಮುಂದಕ್ಕೆ ಹಾಕುವುದಕ್ಕೆ ಹೇಳಿ ಎಂದು ಹೇಳುತ್ತಾರೆ. ಹಾಗಾದಾಗ, ಸಂಬಂಧಪಟ್ಟ MLA ಗಳು ಏನು ಮಾಡಬೇಕು? ಜಿಲ್ಲಾ ಮಂತ್ರಿಗಳಿಗೆ ಪುರುಸೋತ್ತೇ ಇರುವುದಿಲ್ಲ. ಹಾಗಾದರೆ, MLA ಗಳು ಅವರ duty discharge ಮಾಡುವ ಹಾಗಿಲ್ಲವೇ?

ಶ್ರೀ ಕೆ.ಎಂ. ಶಿವಲಿಂಗೇಗೌಡ : ನನ್ನ ಕ್ಷೇತ್ರದಲ್ಲಿ ಇಂಥ ಕಾರ್ಯಕ್ರಮ ಇಂಥ ದಿವಸ ಇದೆ ಎಂದು pamphlets print ಮಾಡಿ ಹಂಚಿ ನಂತರ ಆ ಕಾರ್ಯಕ್ರಮವನ್ನು ಜಿಲ್ಲಾ ಮಂತ್ರಿಗಳು ಬರುವುದಿಲ್ಲವೆಂದು ಮುಂದಕ್ಕೆ ಹಾಕಿದರು.

ಶ್ರೀ ಸಿದ್ದರಾಮಯ್ಯ : Handbill ಎಲ್ಲಾ ಹಾಕಿರುತ್ತಾರೆ. ನನಗೆ ಗೊತ್ತಿರುವ ಹಾಗೆ, Concerned Minister ಅನ್ನು ಕರೆಯಬೇಕು. Concerned Minister ಗೆ ಪುರುಸೋತ್ತು ಇದ್ದು ಬಂದರೆ ಅವರು attend ಆಗಬೇಕು. ಜಿಲ್ಲಾಮಂತ್ರಿಯನ್ನು ಕಡ್ಡಾಯವಾಗಿ ಕರೆಯಬೇಕೆಂದು ಯಾವ circular ಇವತ್ತಿನವರೆಗೂ issue ಆಗಿಲ್ಲ ಮತ್ತು ಜಿಲ್ಲಾ ಮಂತ್ರಿಯವರು ಎಂಎಲ್ಎ ಕ್ಷೇತ್ರದಲ್ಲಿ interfere ಆಗಿ ನಾನು ಬರುವವರೆಗೆ ಇದನ್ನು ಮುಂದಕ್ಕೆ ಹಾಕಿ, ನಾನು attend ಮಾಡುವವರೆಗೂ, ನನಗೆ ಪುರುಸೊತ್ತಾಗುವವರೆಗೂ ಈ function ಮಾಡಕೂಡದು ಎಂದು ಹೇಳತಕ್ಕಂಥ ಹಕ್ಕು ಅವರಿಗಿಲ್ಲ. ಜಿಲ್ಲಾಮಂತ್ರಿ ಮಾಡುವುದು it is not a constitutional post. ಅದು administration point of view ನಿಂದ ಮಾಡಿರುವ ಒಂದು ಹುದ್ದೆಯಾಗಿದೆ. ಅದಕ್ಕೆ legal ಆದ ಅಧಿಕಾರ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಕ್ಷೇತ್ರಕ್ಕೆ ಅವರು interfere ಆಗುವುದಕ್ಕಾಗುವುದಿಲ್ಲ. He cannot take a decision in my constituency or in anybody's constituency. Then why MLA should be there, whether this side or hat side? It is a disrespect to the MLA.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಇದರ ಜೊತೆಗೆ ಎಂಎಲ್ಸಿಗಳ ಕಾಟ ಬೇರೆ ಇರುತ್ತದೆ.

ಶ್ರೀ ಸಿದ್ದರಾಮಯ್ಯ : ಅದಕ್ಕೋಸ್ಕರ ಇದಕ್ಕೊಂದು ಅಂತಿಮ ಹಾಡಬೇಕು. ಇದರ ಬಗ್ಗೆ ಮೈಸೂರು ಜಿಲ್ಲೆಯಲ್ಲಿ ನಾನು ಮುಖ್ಯಮಂತ್ರಿ

ಯವರ ಗಮನಕ್ಕೂ ಸಹ ತಂದಿದ್ದೆ. ಮಾನ್ಯ ಮುಖ್ಯಮಂತ್ರಿಯವರೇ, ನೀವು ಅಲ್ಲಿಗೆ ಹೋಗಬಾರದಿತ್ತು, ಆ ರೀತಿ ಮಾಡಿದ್ದು ಸರಿ ಇಲ್ಲವೆಂದು ಹೇಳಿದೆ. ಸರಿ ಇಲ್ಲವೆನ್ನುವುದು ಅವರ ಗಮನಕ್ಕೂ ಸಹ ಬಂದಿದೆ. This should not happen here after.

(ಗೊಂದಲ)

ಅಧ್ಯಕ್ಷರು : ಸಾಕಷ್ಟು ಚರ್ಚೆಯಾಗಿದೆ.

(ಗೊಂದಲ)

ಅಧ್ಯಕ್ಷರು : ಎಲ್ಲರ ಕ್ಷೇತ್ರದಲ್ಲೂ ಈ ರೀತಿಯಾಗಿದೆ. ಮಾನ್ಯ ಮುಖ್ಯ ಮಂತ್ರಿಯವರೂ ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಈಗ ತಾವು ಹೇಳಿದ್ದೀರಿ. ಅಶೋಕ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ವಿಚಾರಗಳು ಸದನದಲ್ಲಿ ಎರಡು ಮೂರು ಬಾರಿ ಚರ್ಚೆಯಾಗಿದೆ ಎಂದು ನಾನು ಕೇಳಿದ್ದೇನೆ ಮತ್ತು ಮಾಧ್ಯಮದಲ್ಲಿ ಓದಿದ್ದೇನೆ. ನಿಜ, ಈಗಾಗಲೇ ಪ್ರಸ್ತಾಪವಾದಂತಹ ಸಂಗತಿಗಳು ಸತ್ಯವಾಗಿವೆ. ಅದರಲ್ಲಿ ಎರಡು ಮಾತಿಲ್ಲ. ವಿಶೇಷವಾಗಿ ಜಿಲ್ಲಾಮಂತ್ರಿಗಳ ವ್ಯಾಪ್ತಿ ಏನು? ನಿಗಮ ಮಂಡಳಿಗಳ ಅಧ್ಯಕ್ಷರಿಗೆ ಇರುವ ಸ್ಥಾನ ಮಾನಗಳೇನು? ಈ ತರಹ ಬೇರೆ ಬೇರೆ ವ್ಯವಸ್ಥೆಯಲ್ಲಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಇವರ ಸ್ಥಾನಮಾನಗಳ ಬಗ್ಗೆ ಸುದೀರ್ಘವಾದ ಚರ್ಚೆಗಳು ಹಿಂದೆ ಕೂಡ ನಡೆದಿದೆ. ಎಲ್ಲೋ ಒಂದು ಹಂತದಲ್ಲಿ ಯಾವುದೇ ಪರಿಹಾರ ಸೂತ್ರಗಳನ್ನು ಇಷ್ಟರವರೆಗೆ ಕಂಡುಕೊಳ್ಳಲಿಕ್ಕೆ ಆಗಲಿಲ್ಲ. ಇದರಿಂದಾಗಿ ಒಂದು ರೀತಿಯ ರಾಜಕೀಯ ವ್ಯತ್ಯಯಗಳಿರಬಹುದು, ಒಂದಷ್ಟು ego problem ನಿಂದ ನಡೆಯುವಂಥ ಸಂಗತಿಗಳಿರಬಹುದು, ಇದರಿಂದ ಭಾರಿ ತೊಂದರೆಯಾಗು ವುದನ್ನು ಬೇರೆ ಬೇರೆ ಹಂತಗಳಲ್ಲಿ ಕಂಡಿದ್ದೇವೆ ಮತ್ತು ಇದನ್ನು ಒಂದು ರೀತಿಯಲ್ಲಿ ಪರಿಹಾರ ಮಾಡಬೇಕೆಂದು ಉತ್ತರಗಳನ್ನು ಕೊಟ್ಟಾದ ಮೇಲೆ ಆ ಉತ್ತರ ಕೇವಲ ಕಡತದಲ್ಲಿ ಉಳಿದಿದ್ದು, ಇದಕ್ಕೆ ಪರಿಹಾರವನ್ನು ಕಂಡು ಕೊಳ್ಳಲಿಕ್ಕಾಗದಿರುವ ಸಂಗತಿಯನ್ನು ನೋಡಿದ್ದೇವೆ. ದಿನನಿತ್ಯ Complaint ಗಳು ಬರುತ್ತಿವೆ. ಇದು ಪ್ರಾರಂಭವಾದದ್ದು ಕೋರ್ಟಿನ ಕಾರ್ಯಕ್ರಮದ

ಮುಖಾಂತರ. ಆದರೆ, ವಾಸ್ತವಿಕವಾಗಿ ಇದು ಎಲ್ಲಾ ಭಾಗಗಳಲ್ಲಿ ತನ್ನ ಹಸ್ತವನ್ನು ಚಾಚಿದೆ. ಯಾರ್ಯಾರ ಕಾರ್ಯಕ್ಷೇತ್ರದಲ್ಲಿ ಯಾರ್ಯಾರು ಹಸ್ತಕ್ಷೇಪ ಮಾಡುತ್ತಾರೆ, ಯಾರ್ಯಾರ ಕಾರ್ಯಕ್ಷೇತ್ರವನ್ನು ಯಾರ್ಯಾರು ಮೊಟಕು ಗೊಳಿಸುತ್ತಾರೆ ಎಂದು ಹೇಳುವುದನ್ನು ಕೂಡ ನಾವು ಬೇರೆ ಬೇರೆ ಕಡೆಯಿಂದ ಕಂಡಿದ್ದೇವೆ. ಪ್ರತಿ ವಿಧಾನ ಸಭೆಯಲ್ಲೂ ಈ ರೀತಿಯ ಒಂದು, ಎರಡು, ಮೂರು ಸಮಸ್ಯೆಗಳು ಬಂದೇ ಬರುತ್ತವೆ. ಅಧಿಕಾರಿಯದ್ದು ಇರಬಹುದು ಶಾಸಕರದ್ದು ಇರಬಹುದು ಅಥವಾ ಮಂತ್ರಿಗಳದ್ದಿರಬಹುದು. ಯಾರಿಗೂ ಅವಮಾನವಾಗದ ರೀತಿಯಲ್ಲಿ, ಯಾರಿಗೂ ಹಕ್ಕುಚ್ಯುತಿಯಾಗದ ರೀತಿಯಲ್ಲಿ protocol ನ ಬಗ್ಗೆ ವಿಶೇಷವಾದಂಥ ಹೆಜ್ಜೆಯನ್ನು ಸರ್ಕಾರ ಇಡಲೇಬೇಕಾಗಿದೆ. ಇಲ್ಲದೇ ಹೋದರೆ, ಇದರಿಂದಾಗಿಯೇ ನಾವು ಯಾವುದೋ ಒಂದು ಹಂತಕ್ಕೆ ಹೋಗುವಂತ ಸಂದರ್ಭ ಖಂಡಿತ ನಿರ್ಮಾಣವಾಗಬಹುದು, ಇದರಲ್ಲಿ ಎರಡು ಮಾತಿಲ್ಲ. ಯಾರೋ ಒಬ್ಬರು ಚುನಾವಣೆಯಲ್ಲಿ ಸೋತಿರುತ್ತಾರೆ. ಅವನ ಪಕ್ಷ ಆಡಳಿತಕ್ಕೆ ಬಂದಿರುತ್ತದೆ. ಅವನಿಗೆ ಒಂದು rehabilitation centre ಮಾಡಬೇಕಾಗಿರುತ್ತದೆ. ನಾನು ನನ್ನ ಮನಸ್ಸಿನ ಭಾವನೆಗಳನ್ನು ಹೇಳುತ್ತಿದ್ದೇನೆ. ಪರೋಕ್ಷವಾಗಿ ನಿಮ್ಮ ಜೊತೆ ನನ್ನ ಸಮಹತವಿದೆ. ಅದನ್ನು ನಾನು ಹೇಳುತ್ತಿದ್ದೇನೆ. ಇದರಿಂದ ಏನಾಗುತ್ತದೆಂದರೆ, ಆ ರೀತಿ ಸೋತು ಗೆದ್ದ ರಾಜಕೀಯ ದ್ವೇಷಗಳು ಪುನರಾವರ್ತನೆಯಾಗಿ ಮುಂದುವರಿಯುವಂತಹ ಪ್ರಕ್ರಿಯೆಗಳನ್ನು ಇಡೀ ರಾಜ್ಯದಲ್ಲಿ ನಾವು ನೋಡುತ್ತಿದ್ದೇವೆ. ಇದು ನಮ್ಮ ಕಾಲದಿಂದಲ್ಲ, ಬಹಳ ಹಿಂದಿನಿಂದಲೂ, ಬಹಳ ಸಮಯದಿಂದಲೂ ನಡೆದುಕೊಂಡು ಬಂದಿದೆ. ಖಂಡಿತವಾಗಿಯೂ ಇದಕ್ಕೆ ಏನಾದರೊಂದು ಇತಿಶ್ರೀ ಹಾಕಬೇಕಾದ ಅವಶ್ಯಕತೆ ಇದೆ. ನನಗೆ ಅನಿಸುತ್ತದೆ, ನಾನು ಇದರ ಬಗ್ಗೆ ನನ್ನ ಅಧಿಕಾರಿಗಳ ಜೊತೆ, ಬಾಕಿಯವರ ಜೊತೆ ಸಮಾಲೋಚನೆ ಮಾಡಬೇಕು. ಎಲ್ಲಾ floor leaders ಅನ್ನು ಒಮ್ಮೆ ಕರೆಯಬೇಕು. ಒಮ್ಮೆ ಕುಳಿತುಕೊಳ್ಳಬೇಕು, ಚರ್ಚೆ ಮಾಡಬೇಕು. ಯಾವಾಗ ಎಂದು ಹೇಳುತ್ತೇನೆ. ಎಲ್ಲವನ್ನೂ ಈಗಲೇ ಮಾಡಿ ಎಂದು ಕೇಳಿದರೆ ನನ್ನಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರುವಂತದ್ದು ಇದೆ. ಆದಕಾರಣ, ಇದಕ್ಕೆ ಏಕ ಹಂತದಲ್ಲಿ ಪರಿಹಾರ ಕಂಡುಕೊಳ್ಳುತ್ತೇನೆಂದು ಹುಚ್ಚು ಮಾತು ಹೇಳಿಲಿಕ್ಕೆ ನಾನು ತಯಾರಿಲ್ಲ. ಆದಕಾರಣ, ಈ ಬಗ್ಗೆ ಒಂದಷ್ಟು ವಿಮರ್ಶೆಗಳನ್ನು

ಮಾಡಿ, ನಾನು ಮತ್ತೆ ಮುಂದಿನ ಅಧಿವೇಶನದೊಳಗೆ ಆ ಒಂದು ವರದಿಯನ್ನು ತೆಗೆದುಕೊಂಡು ಸದನಕ್ಕೆ ಬರುವವನಿದ್ದೇನೆ. ಯಾರ್ಯಾರನ್ನೆಲ್ಲ ಸೇರಿಸಿಕೊಂಡು ಏನೆಲ್ಲಾ ಚರ್ಚೆ ಮಾಡಬೇಕು ಎಂಬುದರ ಬಗ್ಗೆ ಯೋಚಿಸುತ್ತೇನೆ. ವಿಪಕ್ಷ ನಾಯಕರು, floor leaders ಅನ್ನೂ ಸಹ ಸೇರಿಸಿಕೊಂಡು ಚರ್ಚೆ ಮಾಡುತ್ತೇನೆ. ಏಕೆಂದರೆ, ಇದಕ್ಕೊಂದು ಶಾಶ್ವತವಾದ ಪರಿಹಾರ ಕಂಡುಕೊಳ್ಳದಿದ್ದರೆ, ಇದು ಹಂತ ಹಂತವಾಗಿ ಮುಂದುವರಿದು ರಾಜಕೀಯ ದ್ವೇಷಕ್ಕೆ, ಇನ್ನೊಂದು ಬೆಂಕಿ ಹಚ್ಚಲಿಕ್ಕೆ, ಎಣ್ಣೆ ಹಾಕಲಿಕ್ಕೆ ಒಂದು ವೇದಿಕೆಯಾಗಿ ಪರಿವರ್ತನೆಯಾಗುತ್ತದೆಂದು ನಾನು ಭಾವಿಸುತ್ತಿದ್ದೇನೆ. ನಿಜ, ಈಗ ಆದ ವಿಚಾರಗಳೆಲ್ಲವನ್ನೂ ನಾವು ನೋಡುತ್ತೇವೆ. ವಿಶೇಷವಾಗಿ ಸನ್ಮಾನ್ಯ ಬಿ.ಸಿ. ಪಾಟೀಲರು ಪ್ರಸ್ತಾಪ ಮಾಡಿದ ವಿಚಾರ ಇದೆ. ನಿಜ. ಹಕ್ಕುಚ್ಯುತಿ ಆಗಿದೆಯೋ ಇಲ್ಲವೋ ಎನ್ನುವುದಕ್ಕಿಂತಲೂ ಇದೊಂದು ನ್ಯಾಯಾಂಗಕ್ಕೂ ನಮಗೂ ಇರುವಂಥ ಸಂಬಂಧಕ್ಕೆ ಸಂಬಂಧಿಸಿದ ಸಂಗತಿಯಾದ ಕಾರಣ ನಾನು ಈಗಾಗಲೇ ಪ್ರಸ್ತಾಪ ಮಾಡಿದ ರೀತಿಯಲ್ಲಿ ನಮ್ಮ Chief Justice ರವರಿಗೂ ತಿಳಿಸುತ್ತೇವೆ. Judges preside ಮಾಡುತ್ತಿದ್ದರೂ ಕೂಡ ನಮ್ಮ ಅಭ್ಯಂತರಗಳಿರಲಿಲ್ಲ. ಆದರೆ, ಯಾರೋ ಒಬ್ಬ ಅಲ್ಲಿರುವಂಥ Bar Association ಅಧ್ಯಕ್ಷರು, ಅಲ್ಲಿರುವ Bar Association ಅಧ್ಯಕ್ಷರು ಇವರಿಗೆ vote ಹಾಕಿದವರೇನೋ, ಬೇರೆ ಒಬ್ಬರಿಗೆ ಹಾಕಿದ್ದಾರೋ ಗೊತ್ತಿಲ್ಲ! ಆದರೆ, ಅವರಿಂದಲೇ ಚುನಾಯಿತರಾದ ಒಬ್ಬ ಜನಪ್ರತಿನಿಧಿಗೆ ಒಂದು ರೀತಿಯಲ್ಲಿ ಮುಜುಗರ ಉಂಟುಮಾಡುವಂಥ, ಒಂದು ರೀತಿಯ ಹಕ್ಕುಚ್ಯುತಿ ಉಂಟು ಮಾಡುವಂಥ ಸಂಗತಿ ಆಗಿದ್ದರ ಬಗ್ಗೆ ಮುಖ್ಯ ನ್ಯಾಯಾಧೀಶರ ಜೊತೆ ಮಾತನಾಡಿ, ಬಿ.ಸಿ.ಪಾಟೀಲರ ಜೊತೆಯೂ ಮಾತನಾಡುವ ಕೆಲಸ ಮಾಡುತ್ತೇವೆ. ನಾನು clarification ಕೊಡಲಿಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ, ಒಂದು ಜಿಲ್ಲಾಮಟ್ಟದ ಕಾರ್ಯಕ್ರಮವಾಗಿತ್ತು, ಆ ಜಿಲ್ಲಾಮಟ್ಟದ ಕಾರ್ಯ ಕ್ರಮದಲ್ಲಿ ಜಿಲ್ಲಾ ಮಂತ್ರಿಗಳು ಅಲ್ಲಿ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲಿಲ್ಲ. ನಾನು ಹೇಳಿದ್ದರಲ್ಲಿ ಇದೆಲ್ಲಾ ಸೇರಿದೆ ಎಂದು ನಾನು ಭಾವಿಸುತ್ತೇನೆ.

(ಗೊಂದಲ)

ಡಾ: ಹೆಚ್.ಸಿ. ಮಹಾದೇವಪ್ಪ : ನೀವು correct ಆಗಿ ಹೇಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಇದಕ್ಕೊಂದು ಇತಿಶ್ರೀ ಹಾಡಬೇಕು. ಇದು ಇವತ್ತು ನಿನ್ನೆ ಚರ್ಚೆ ಮಾಡಿದ್ದಲ್ಲ. BAC ಯಲ್ಲಿ

ನೀವು ಮುಖ್ಯಮಂತ್ರಿಯಾಗುವುದಕ್ಕೆ ಮುಂಚಿನಿಂದಲೂ ಈ ವಿಷಯ ಚರ್ಚೆಯಾಗುತ್ತಲೇ ಬಂದಿದೆ. ಮಾನ್ಯ ಶ್ರೀ ಸುರೇಶ್ ಕುಮಾರ್‌ರವರು ಇಲ್ಲಿಯೇ ಇದ್ದಾರೆ. ಈ ಅಧಿವೇಶನದಲ್ಲಿ ಅಲ್ಲ, ಮುಂದಿನ ಅಧಿವೇಶನದಲ್ಲಿ ತೀರ್ಮಾನ ಮಾಡುತ್ತೇವೆನ್ನುತ್ತಾರೆ, ಈ ರೀತಿ ಈ ವಿಷಯ ಮುಂದಕ್ಕೆ ಹೋಗುತ್ತಲೇ ಇದೆ. ಶಾಸಕರು ಈ ವಿಚಾರಗಳನ್ನು ಪದೆ ಪದೇ ಆ ಕಡೆಯಿಂದ ಈ ಕಡೆಯಿಂದ ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಹೀಗೆಯೇ ಮುಂದುವರಿಯಬೇಕೆ ಎಂಬುದು ಮೊದಲನೇ ಪ್ರಶ್ನೆ, ಎರಡನೆಯದಾಗಿ, ನಾವು ಈ ತೀರ್ಮಾನ ಮಾಡಲಿಕ್ಕೆ ಈ ಸದನಕ್ಕೆ ಅಧಿಕಾರವಿದೆ, ನಿಮಗೆ ಅಧಿಕಾರವಿದೆ. ನಮ್ಮ ಹಕ್ಕುಗಳ ರಕ್ಷಣೆಯಾಗಬೇಕೆಂದರೆ ಏನು ಮಾಡಬೇಕೆನ್ನುವುದನ್ನು ನೀವು ತೀರ್ಮಾನ ಮಾಡಬೇಕು, ನಾವು, ಈ ಸದನ ಸಲಹೆಗಳನ್ನು ಕೊಡಲಿಕ್ಕೆ ಅಧಿಕಾರವಿದೆ. ಆದರೆ, ಸರ್ಕಾರ ಈ ತೀರ್ಮಾನ ಮಾಡಬೇಕಾಗಿರುವಂಥದ್ದು. Judgeಗಳ ಜೊತೆ ಮಾತನಾಡಬಾರದೆಂದು ನಾವು ಹೇಳುವುದಿಲ್ಲ. ಹಾಗೆಂದು ಹೇಳಿ Judge ಗಳಿಗೆ ಅಗೌರವ ಮಾಡಬೇಕೆಂದಲ್ಲ. Judges ಬಂದು ಉದ್ಘಾಟನೆ ಮಾಡಲಿ. ಆದರೆ, MLA preside ಮಾಡಬಾರದೆಂದು ಏಕೆ ಹೇಳುತ್ತಾರೆ? ಅವರು ಹೇಳಿದ್ದಾರೋ, ಇಲ್ಲವೋ ನನಗಂತೂ ಗೊತ್ತಿಲ್ಲ. Bar Association President Preside ಮಾಡಬಹುದು ಎಂದರೆ why not an MLA elected by the people? ಇದು ಪ್ರಜಾಪ್ರಭುತ್ವಕ್ಕೆ ಆಗುವಂಥ ಅವಮಾನ. Parliamentary system of Government ಗೆ ಆಗುವಂಥ ಅವಮಾನ. ಮೈಸೂರಿಗೆ ಮಾನ್ಯ ಮುಖ್ಯಮಂತ್ರಿಯವರು ಹೋಗಿದ್ದರೆ. ಹಾಗೆಯೇ ಇಡೀ ಜಿಲ್ಲೆಯ ಕಾರ್ಯಕ್ರಮ ಎಂದು ಮಾಡುವುದಕ್ಕೆ ಬರುವುದಿಲ್ಲ. ಮುಖ್ಯಮಂತ್ರಿಯವರು ನನ್ನ ಕ್ಷೇತ್ರದ Old Age Pension ಅನ್ನು ವಿತರಣೆ ಮಾಡುವುದಕ್ಕೆ ಹೋಗಬೇಕೇ? ಅದು ಜಿಲ್ಲಾ ಕಾರ್ಯಕ್ರಮವೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾನು ನಾಲ್ಕು ಸಲ ಗೆದ್ದಿದ್ದೇನೆ, ನನಗೂ ಆ ಕಾರ್ಯಕ್ರಮದ ಬಗ್ಗೆ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ : ಈ ತರಹ ಆಗುವುದಾದರೆ, ಇದು District ಕಾರ್ಯಕ್ರಮ, MLA ಗಳಿಗೆ ಗೌರವ ಕೊಡುವುದಿಲ್ಲವೆಂದು ಹೇಳುವುದಾದರೆ I can't agree with that. ಸರ್ಕಾರದ ಧೋರಣೆ ಈ ತರಹದ್ದು

ಆಗುವುದಾದರೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಇದು ಒಬ್ಬರ ಸಮಸ್ಯೆಯಲ್ಲ. ನಾಳೆ ನಾವು ಅಧಿಕಾರಕ್ಕೆ ಬಂದು ಅಲ್ಲಿರುವವರು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡಾಗ ಆ ತರಹ ಮಾಡುವುದಕ್ಕಾಗುತ್ತದೆಯೇ? ನಾನೂ ಸಹ ಅನೇಕ ಸಾರಿ District in charge Minister ಆಗಿದ್ದೆ. I never did it.

ಡಾ: ಹೆಚ್.ಸಿ. ಮಹದೇವಪ್ಪ : ನಮ್ಮೆಲ್ಲ ಕ್ಷೇತ್ರಗಳಲ್ಲಿ ಆ ತರಹ ಆಗಿದೆ. ಮುಖ್ಯಮಂತ್ರಿಯವರು ಬಂದಿದ್ದು ಸಂತೋಷ.

ಶ್ರೀ ಸಿದ್ದರಾಮಯ್ಯ : ಮುಖ್ಯಮಂತ್ರಿಯವರೆ, ನಮ್ಮ ಕ್ಷೇತ್ರಕ್ಕೆ ಬನ್ನಿ.

ಡಾ: ಹೆಚ್.ಸಿ. ಮಹದೇವಪ್ಪ : ನಾವೆಲ್ಲ senior ಸದಸ್ಯರಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಿಮಗೆ ಆಹ್ವಾನ ಮಾಡುತ್ತೇವೆ, ಬನ್ನಿ ನಮ್ಮ ಕ್ಷೇತ್ರಕ್ಕೆ ಬಂದು ಕಾರ್ಯಕ್ರಮಗಳನ್ನು ಉದ್ಘಾಟನೆ ಮಾಡಿ ಅಥವಾ ಬೇರೆ ಯಾವುದಾದರೂ ಕಾರ್ಯಕ್ರಮಕ್ಕೆ ಬನ್ನಿ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ : Is this the way in which the Democracy functions?

ಶ್ರೀ ಸಿದ್ದರಾಮಯ್ಯ : ನಾನು ಇಡಿ ಜಿಲ್ಲೆಗೆ ಬರುತ್ತೇನೆ, ಇಲ್ಲವೆಂದರೆ, ಜಿಲ್ಲಾ ಮಂತ್ರಿಗಳು ಮಾಡಿದ್ದೇ ಸರಿ ಎನ್ನುವುದಾದರೆ, ನಾವು protest ಮಾಡಬೇಕಾಗುತ್ತದೆ. This is not the correct.

ಅಧ್ಯಕ್ಷರು : ಆಯಿತು, ಇದನ್ನು ಮುಗಿಸೋಣ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನೀವು ಹೇಳಬೇಕು.

ಅಧ್ಯಕ್ಷರು : ಈಗ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : I am sorry. Please, give direction to the Government.

ಶ್ರೀ ಬಿ.ಸಿ. ಪಾಟೀಲ್ : ನಮಗೆ ಅವಮಾನವಾಗಿದೆ. ಕಾನೂನು ಸಚಿವರು ನಿರ್ಧಾರ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ಹೇಳುತ್ತೇನೆ. ಹೇಳಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ : ಅವರು ಮಾಡಿದರೂ ನೀವು ಹೋಗಬಾರದು. ನೀವು ಅವರಿಗೆ ಹೇಳಬೇಕು. you are the Chief Minister, you are the head of the Government. You can't violate the protocol.

ಶ್ರೀ ಡಿ.ವಿ. ಸದಾನಂದಗೌಡ : ಈ ಚರ್ಚೆಯನ್ನು ಸುದೀರ್ಘವಾಗಿ ತೆಗೆದುಕೊಂಡು ಹೋಗಲು ನಾನು ಇಚ್ಛೆಪಡುವುದಿಲ್ಲ. ನನ್ನ ಮನಸ್ಸಿನ ಭಾವನೆಗಳು, protocol ಮತ್ತೊಂದರಲ್ಲಿರುವ ವಿಷಯಗಳ ಬಗ್ಗೆ confusion ಗಳಿವೆ. ಇದಕ್ಕೊಂದು ಇತಿಶ್ರೀ ಹಾಡಬೇಕೆಂದಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹಕ್ಕುಚ್ಯುತಿ ಆಗಿದೆ ಯಾರು ರಕ್ಷಣೆ ಮಾಡುತ್ತಾರೆ?

(ಗೊಂದಲ)

ಶ್ರೀ ಬಿ.ಸಿ. ಪಾಟೀಲ್ : ಕಾನೂನು ಮಂತ್ರಿಯವರು expert ಇದ್ದಾರೆ. ಇದರಲ್ಲಿ ಏಕೆ ಅವರು expert ಆಗುತ್ತಿಲ್ಲ?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಶಂಕರಲಿಂಗೇಗೌಡರು ಅಲ್ಲಿ ಅಧ್ಯಕ್ಷ ಸ್ಥಾನ ವಹಿಸಿದ್ದರು. ಅದು ಅವರ ಕ್ಷೇತ್ರ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Can you preside for the entire district? ಸೌಲಭ್ಯ ಯಾರ ಕ್ಷೇತ್ರದವು? ಕಾರ್ಯಕ್ರಮ ಯಾವ ಕ್ಷೇತ್ರದ್ದು? ಸವಲತ್ತುಗಳು ಯಾವ ಕ್ಷೇತ್ರದ್ದು?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಅವರ ಕ್ಷೇತ್ರದಲ್ಲಿ ಕಾರ್ಯಕ್ರಮ ಆಗಿದ್ದು, ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಿಲ್ಲ. ಆದರೆ, ಎಲ್ಲೋ ಒಂದು ಕಡೆ ಇದೊಂದು ಗಂಭೀರವಾದ ವಿಚಾರವೆನ್ನುವುದು ನನ್ನ ಮನಸ್ಸಿನಲ್ಲಿದೆ. ಇದನ್ನು ಸರಿಪಡಿಸಬೇಕೆಂಬ ಆಲೋಚನೆಯಲ್ಲಿದ್ದೇವೆ. ಇದಕ್ಕೆ ಕಾಲಾವಕಾಶ ಬೇಕು, ಮಾಡುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸರ್ಕಾರದ ಧೋರಣೆ ಏನಿದೆ I don't like it.

ಅಧ್ಯಕ್ಷರು : ನಾನು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನಿಮಗೆ ಅಧಿಕಾರವಿದೆ. ದಯಮಾಡಿ, ಆ ಕೆಲಸ ಮಾಡಿ.

ಅಧ್ಯಕ್ಷರು : ನಾನು ಹೇಳಲಿಕ್ಕೇ ಅವಕಾಶ ಕೊಡದಿದ್ದರೆ ಇದನ್ನು ಮುಕ್ತಾಯ ಮಾಡಬೇಕಷ್ಟೆ.

(ಗೊಂದಲ)

ಅಧ್ಯಕ್ಷರು : ಶಿಷ್ಟಾಚಾರದ ಬಗ್ಗೆ ಮಾನ್ಯ ಬಿ.ಸಿ. ಪಾಟೀಲರು ಅವರ ಕ್ಷೇತ್ರದ ನ್ಯಾಯಾಲಯದ ಉದ್ಘಾಟನಾ ಸಮಾರಂಭದಲ್ಲಿ ಅವರನ್ನು ಕಡೆಗಣಿಸಿದ್ದಾರೆನ್ನುವಂಥ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಕೊಟ್ಟಿದ್ದಾರೆ. ಇದರಲ್ಲಿ ನ್ಯಾಯಾಂಗದ ವ್ಯವಸ್ಥೆಯೂ involve ಆಗಿರುವುದರಿಂದ ಒಂದಿಷ್ಟು ಪರಿಶೀಲನೆ ಮಾಡಿ ಏನು ಮಾಡಬೇಕೆಂದು ಆದೇಶ ಮಾಡುತ್ತೇನೆ. ಹಲವಾರು ಗೌರವಾನ್ವಿತ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರು ಶಾಸಕರಿಗೆ ಅಗೌರವ ಆಗುವಂಥ ರೀತಿಯಲ್ಲಿ ಸರ್ಕಾರಿ ಕಾರ್ಯಕ್ರಮಗಳು ನಡೆಯುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಸರ್ಕಾರಕ್ಕೆ ಈ ಹಿಂದೆ ಕೂಡ ಹೇಳಿತ್ತು. ನಾನು ಸ್ಪಷ್ಟ ಸೂಚನೆಯನ್ನು ಕೊಡುತ್ತೇನೆ. ಈ ಅಧಿವೇಶನ ಮುಗಿಯುವುದರೊಳಗೆ ಶಿಷ್ಟಾಚಾರ ಅಥವಾ protocol ಬಗ್ಗೆ ಒಂದು ನಿರ್ದಿಷ್ಟ ನಿಲುವು ತೆಗೆದುಕೊಂಡು ಸದನದಲ್ಲಿ ಪ್ರಕಟಿಸಬೇಕೆಂದು ನಾನು ಈ ಮೂಲಕ ಸೂಚನೆ ಕೊಡುತ್ತಿದ್ದೇನೆ. ಇನ್ನು ಮುಂದೆ ಇದಕ್ಕೆ ಅವಕಾಶ ಆಗಬಾರದು.

ಶ್ರೀ ಬಿ.ಸಿ. ಪಾಟೀಲ್ : ಹಾಗಾದರೆ, ಶಿಷ್ಟಾಚಾರ ಸ್ಪಷ್ಟವಾಗುವವರೆಗೆ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳನ್ನು ಬಂದ್ ಮಾಡಿಬಿಡಿ.

ಅಧ್ಯಕ್ಷರು : ಈ ವಿಚಾರವನ್ನು ಮುಕ್ತಾಯ ಮಾಡಿದ್ದೇನೆ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದು ಅನ್ಯಾಯ.

ಅಧ್ಯಕ್ಷರು : ಹೇಳಿದ್ದೇನಲ್ಲ?

ಶ್ರೀ ಬಿ.ಸಿ. ಪಾಟೀಲ್ : ನನಗೆ ಅನ್ಯಾಯವಾಗಿದೆ.

ಅಧ್ಯಕ್ಷರು : ನೋಡಿ ಆದೇಶ ಮಾಡುತ್ತೇನೆಂದು ಹೇಳಿದ್ದೇನೆ. ನಾನು ಇನ್ನೂ ಮುಕ್ತಾಯ ಮಾಡಲಿಲ್ಲ. I will go through it and pass orders.

ಶ್ರೀ ಪಿ.ಎಂ. ಅಶೋಕ್ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಆಯಿತು ಹೇಳಿದ್ದೇನೆ.

ಶ್ರೀ ಪಿ.ಎಂ. ಅಶೋಕ್ : ಹಿಂದಿನ ಅಧಿವೇಶನದಲ್ಲಿ ಈ ಬಗ್ಗೆ ಹೇಳಿದ್ದೆ. ನಮ್ಮ ರಾಮದುರ್ಗ ತಾಲ್ಲೂಕಿನ ಹೊಸಕೋಟೆ ಗ್ರಾಮದಲ್ಲಿ ಒಂದು ಆಸ್ಪತ್ರೆಯ inauguration ಆಗಬೇಕಾಗಿತ್ತು.

ಅಧ್ಯಕ್ಷರು : ಈಗ ಹೇಳಿದ್ದೇನೆ. ಮತ್ತೆ ಮತ್ತೆ ಅವಕಾಶವಿಲ್ಲ. ಅವಕಾಶ ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು : ಯಾವುದೂ ದಾಖಲೆಗೆ ಹೋಗುತ್ತಿಲ್ಲ. ಒಂದು ಸಲ ತೀರ್ಮಾನವಾದ ಮೇಲೆ ಪುನಃ ಕೇಳುತ್ತೀರಲ್ಲ?

(ಉ) ವಿಷಯ : ಕೃಷ್ಣಾ ನದಿ ಪಾತ್ರ ಬತ್ತಿದ್ದು ಕುಡಿಯುವ ನೀರಿಗೆ ಮಹಾರಾಷ್ಟ್ರದ ಕೊಯ್ನಾದಿಂದ ನೀರು ಬಿಡಿಸುವ ಬಗ್ಗೆ.

ಶ್ರೀ ಸಿದ್ದು ಸವದಿ (ತೇರದಾಳ) : ಉತ್ತರ ಕರ್ನಾಟಕದ ಜೀವನದಿಯಾದ ಕೃಷ್ಣಾ ನದಿಯ ಪಾತ್ರ ಬತ್ತಿ ಹೋಗಿದ್ದರಿಂದ, ಸಾವಿರಾರು ಎಕರೆಯಲ್ಲಿ ಬೆಳೆದ ಬೆಳೆಗೆ ಹಾನಿಯಾಗುವ ಪರಿಸ್ಥಿತಿ ಬಂದೊದಗಿದೆ. ಅದಲ್ಲದೆ, ನದಿಯ ದಡದಲ್ಲಿರುವ ಹತ್ತಾರು ನಗರಗಳು ಅದು ಜಮಖಂಡಿ, ಮುಧೋಳ, ಬನಹಟ್ಟಿ, ತೇರದಾಳ, ಕುಡುಚಿ ಇರಬಹುದು, ಹೀಗೆ ಹತ್ತಾರು ನಗರಗಳಿಗೆ ಕುಡಿಯುವ ನೀರಿಲ್ಲದೆ ಅತ್ಯಂತ ಗಂಭೀರ ಪರಿಸ್ಥಿತಿ ಬಂದೊದಗಿದೆ. ಆ ಕಾರಣಕ್ಕಾಗಿ ತಕ್ಷಣ ಇಂದೇ ಮಹಾರಾಷ್ಟ್ರದ ಕೊಯ್ನಾದಿಂದ ನೀರು ಬಿಡಿಸುವ ಪ್ರಕ್ರಿಯೆಗೆ ಸರ್ಕಾರದಿಂದ ಚಾಲನೆ ದೊರಕಬೇಕು. ಅಲ್ಲಿ ನದಿ ಬತ್ತಿ ಹೋಗಿ ಈಗಾಗಲೆ ಒಂದು, ಒಂದೂವರೆ ತಿಂಗಳಾಯಿತು. ಬೇಸಿಗೆ ದಿವಸಗಳಲ್ಲಿ ಭಯಾನಕ ಪರಿಸ್ಥಿತಿ ನಿರ್ಮಾಣ ವಾಗಿದೆ. ದಯಮಾಡಿ, ನೀರಿನ ಸಲುವಾಗಿ ಮಹಾರಾಷ್ಟ್ರಕ್ಕೆ ಬಾಕಿ ಕೊಡುವುದಿದ್ದರೆ, ಆ ಬಾಕಿಯನ್ನು pay ಮಾಡಿ ಮತ್ತೆ 4 ರಿಂದ 5 ಟಿ.ಎಂ.ಸಿ. ನೀರನ್ನು ಕೊಯ್ನಾ ಡ್ಯಾಂನಿಂದ ಕೃಷ್ಣಾ ನದಿಗೆ ಬಿಡಿಸಿ, ಕುಡಿಯುವ ನೀರು ಮತ್ತು ರೈತರು ಬೆಳೆದ ಸಾವಿರಾರು ಎಕರೆ ಕಬ್ಬಿನ ಬೆಳೆ ಅಥವಾ ಆರ್ಥಿಕ